
ANANTHKUMAR PRATISHTHANA

# ಅನಂತಪಥ


ಪುಟ 8
ವ್ಯಕ್ತಿ ವಿಶೇಷ ಮಾಲಿಕೆ
ದಾನ ಚಿಂತಾಮಣಿ ಅತ್ತಿಮಬ್ಬೆ



ಸಂಪುಟ - 6 ಸೆಪ್ಟೆಂಬರ್ - 2025 ಸಂಚಿಕೆ - 63

# ಅನಂತವನಕ್ಕೆ ದಶಕದ ಸಾರ್ಥಕ ಸಂಭ್ರಮ

## ದೂರಗಾಮಿ ಚಿಂತನೆಯ ನೇತಾರ ಅನಂತಕುಮಾರ್ ಅವರ ಪರಿಸರಕಾಳಜಿಗೆ ಸಾಕ್ಷಿ




ಬದುಕನ್ನು ಸಾರ್ಥಕಗೊಳಿಸುವ ಶ್ರೇಷ್ಠ ಮಾರ್ಗ ಸಮಾಜಕ್ಕೆ ನಮ್ಮಿಂದಾದ ಕೊಡುಗೆಯನ್ನು ನೀಡುವುದು ಮತ್ತು ಆ ಮೂಲಕ ಸಮಾಜದ ಕೊರತೆಯನ್ನು ನಿವಾರಿಸುವುದು. ಅದರಲ್ಲೂ ನಾಯಕರಾದವರು ಇಂದಿನ ಕಾರ್ಯಗಳ ಮೂಲಕ ನಾಳೆಗಳನ್ನು ಸುಂದರ, ಸುಭದ್ರಗೊಳಿಸಬೇಕು. ಪರಿಸರದ ನಿಟ್ಟಿನಲ್ಲಿ ಅತೀವ ಕಾಳಜಿ ಹೊಂದಿದ್ದವರು ಮಾಜಿ ಕೇಂದ್ರ ಸಚಿವರು, ಬಿಜೆಪಿಯ ಹಿರಿಯ ನಾಯಕರೂ ಆಗಿದ್ದ ಎಚ್.ಎನ್.ಅನಂತಕುಮಾರ್. ಅವರ ಜನ್ಮದಿನದಂದು ಆರಂಭಿಸಿದ 'ಅನಂತ ವನ' ಪ್ರಸ್ತುತ ದಶಕದ ಸಂಭ್ರಮಕ್ಕೆ ಸಾಕ್ಷಿಯಾಗಿದ್ದು, ಪರಿಸರಪ್ರೀತಿಯ ಕರೆಯನ್ನು ನೀಡುತ್ತಿದೆ.

ಹುಟ್ಟಿದ ದಿನವನ್ನು ಹುಟ್ಟಿದ ಹಬ್ಬವನ್ನಾಗಿಸುವುದು ನಿಜವಾದ ಸಾರ್ಥಕತೆ. ಈ ಪಯಣದಲ್ಲಿ ಕಾಳಜಿ, ಕಠಿಣ ಪರಿಶ್ರಮ, ಆತ್ಮವಿಶ್ವಾಸ, ನಾಯಕತ್ವದ ಮೌಲ್ಯಗಳು ಅಗತ್ಯ ಎಂಬುದನ್ನು ಮರೆಯುವಂತಿಲ್ಲ. ಹೀಗೆ ಹುಟ್ಟಿದ ದಿನವನ್ನು ತಮ್ಮ ಕಾರ್ಯಗಳ ಮೂಲಕವೇ ಹುಟ್ಟುಹಬ್ಬವಾಗಿಸಿದವರು ಮಾಜಿ ಕೇಂದ್ರ ಸಚಿವರು, ಬಿಜೆಪಿಯ ಹಿರಿಯ ನಾಯಕರೂ ಆಗಿದ್ದ ಎಚ್.ಎನ್.ಅನಂತಕುಮಾರ್ ಅವರು. ಜನನಾಯಕರಾಗಿದ್ದರಿಂದ ಸಹಜವಾಗಿಯೇ ಅವರ ಹುಟ್ಟುಹಬ್ಬದ ದಿನ (ಸೆಪ್ಟೆಂಬರ್ 22) ಜನರು, ಹಿತೈಷಿಗಳು, ಸ್ನೇಹಿತರು, ರಾಜಕಾರಣಿಗಳು, ಸಮಾಜದ ವಿವಿಧ ವಲಯದವರು ಬಂದು ಶುಭ ಹಾರೈಸುತ್ತಿದ್ದರು. ಹೀಗೆ ಬಂದವರೆಲ್ಲ ಹೂಗುಚ್ಛ ನೀಡುವುದು, ಅವರಿಗೆ ಪ್ರತಿಯಾಗಿ ಕುಟುಂಬ ಸದಸ್ಯರಿಂದ ಸಿಹಿ ನೀಡುವುದು ಮೊದಲಿಗೆ ವಾಡಿಕೆಯಾಗಿತ್ತು. ಮುಖ್ಯವಾಗಿ, ಅನಂತಕುಮಾರ್ ಅವರು ಜನ್ಮದಿನ ಆಚರಿಸಿಕೊಳ್ಳಲು ಮುಜುಗರ ಪಡುತ್ತಿದ್ದರು. 'ಇದೆಲ್ಲ ಏಕೆ' ಎಂದು ಪ್ರಶ್ನಿಸುತ್ತ, ಕೊನೆಗೆ ಹಿತೈಷಿಗಳ ಒತ್ತಾಯಕ್ಕೆ ಒಪ್ಪಿಕೊಳ್ಳುತ್ತಿದ್ದರು.

ಯಾವುದೇ ಕೆಲಸ ಮಾಡಿದರೂ, ಯೋಜನೆ ಕೈಗೊಂಡರೂ ಅದರಲ್ಲಿ ಸಮಾಜದ ಹಿತವನ್ನು ಪ್ರಧಾನವಾಗಿ ಗಮನಿಸುತ್ತಿದ್ದ ಅವರು ಜನ್ಮದಿನವನ್ನು ಕೂಡ ಸಮಾಜಮುಖಿಯಾಗಿ ಆಚರಿಸಬೇಕು ಎಂದುಕೊಂಡರು. ಅದು 2015ರ ಮಳೆಗಾಲ. ಜೂನ್ 5ರಂದು ಅದಮ್ಯ ಚೇತನ ಸಂಸ್ಥೆಯಿಂದ ಪರಿಸರ ದಿನವನ್ನು ದೊಡ್ಡಮಟ್ಟದಲ್ಲಿ ಆಚರಿಸಿ, ಗಿಡಗಳನ್ನು ನೆಡಲಾಯಿತು. ಅದಮ್ಯ ಚೇತನ ಸಂಸ್ಥೆಯ ಮಾರ್ಗದರ್ಶಕರಾಗಿರುವ ಡಾ.ಹರೀಶ್ ಭಟ್ ಅವರು ಈ ಸಂದರ್ಭದಲ್ಲಿ ಕೆಲವು ಮಹತ್ವದ ಸಂಗತಿಗಳನ್ನು ಅನಂತಕುಮಾರ್ ಅವರೊಂದಿಗೆ ಹಂಚಿಕೊಂಡರು.

'ಒಬ್ಬ ವ್ಯಕ್ತಿಗೆ ವರ್ಷಕ್ಕೆ 700 ಕೆಜಿ ಆಮ್ಲಜನಕದ ಅವಶ್ಯಕತೆ ಇದೆ. ಒಂದು ಗಿಡ ವರ್ಷಕ್ಕೆ 100 ಕೆಜಿ ಆಕ್ಸಿಜನ್ ನೀಡುತ್ತದೆ. ಈ ಅನುಪಾತನದ ಪ್ರಕಾರ ಬೆಂಗಳೂರಿನ (ಆಗಿನ) 1 ಕೋಟಿ ಜನಸಂಖ್ಯೆಗೆ 7 ಕೋಟಿ ಮರಗಳು ಇರಬೇಕಿತ್ತು. ಆದರೆ, ಇದ್ದ ಮರಗಳ ಸಂಖ್ಯೆ ಕೇವಲ 14 ಲಕ್ಷ. ಅಂದರೆ, ಒಬ್ಬ ವ್ಯಕ್ತಿಗೆ ಏಳು ಮರ ಇರಬೇಕಾದ ಸ್ಥಿತಿಯಲ್ಲಿ, ಏಳು ವ್ಯಕ್ತಿಗಳಿಗೆ ಒಂದು ಮರ ಮಾತ್ರವಿದೆ. ಹಸಿರು ನಗರಿ ಹೆಗ್ಗಳಿಕೆಯ ಬೆಂಗಳೂರಿನಲ್ಲೇ ಈ ಸ್ಥಿತಿಯಾದರೆ ಉಳಿದೆಡೆ ಇದಕ್ಕಿಂತಲೂ ಚಿಂತಾಜನಕ. ಸರಾಸರಿ 10-12 ಜನರಿಗೆ ಒಂದು ಮರವಿದೆ. ಈ ಸ್ಥಿತಿಯನ್ನು ಬದಲಾಯಿಸಲು ಗಿಡಮರಗಳ ಸಂಖ್ಯೆ ಹೆಚ್ಚಲೇಬೇಕು' ಎಂದಿದ್ದರು. ಇಲ್ಲಿನ ಪರಿಸರಕ್ಕೆ ಪೂರಕವಾಗಿ ಯಾವೆಲ್ಲ ಗಿಡಮರಗಳನ್ನು ಬೆಳೆಸಬಹುದು ಎಂಬುದರ ಬಗ್ಗೆ ಸಲಹೆಯನ್ನೂ ನೀಡಿದ್ದರು.

ಅವರ ಮಾತುಗಳು ಅನಂತಕುಮಾರ್ ಅವರನ್ನು ಪ್ರಭಾವಿಸಿದ್ದು, ಮಾತ್ರವಲ್ಲ ಈ ನಿಟ್ಟಿನಲ್ಲಿ ರಚನಾತ್ಮಕವಾಗಿ ಕಾರ್ಯ ಕೈಗೊಳ್ಳಬೇಕು ಎಂಬ ನಿರ್ಧಾರಕ್ಕೆ ಬಂದರು. ಯಾವ ಬಗೆಯ ಗಿಡಮರಗಳನ್ನು ನೆಡವುದು ಸೂಕ್ತ ಮತ್ತು ಅದನ್ನು ಯಾವ ಬಗೆಯಲ್ಲಿ ಪೋಷಿಸಬೇಕು ಎಂಬುದರ ಬಗ್ಗೆ ಖ್ಯಾತ ಪರಿಸರ ತಜ್ಞ ಡಾ.ಯಲ್ಲಪ್ಪ ರೆಡ್ಡಿ ಅವರಿಂದ ಉಪಯುಕ್ತ ಸಲಹೆಗಳನ್ನು ಪಡೆಯಲಾಯಿತು. 2015ರಲ್ಲಿ ಅನಂತಕುಮಾರ್ ಅವರ 57ನೇ ಜನ್ಮದಿನವನ್ನು ಗಿಡನೆಡುವ ಮೂಲಕ ಆಚರಿಸಬೇಕು ಎಂಬ ನಿರ್ಧಾರ ಚಿಗುರೊಡೆದು, ಅದುವೇ 'ಅನಂತವನ'ವಾಯಿತು. ಅಂದು 57 ಗಿಡಗಳನ್ನು ನೆಡಲಾಯಿತು. ಕಳೆದ ಒಂದು ದಶಕದಲ್ಲಿ ಇದು ಹಸಿರು ಸಮೃದ್ಧಿಯ ತಾಣವಾಗಿ ಬೆಳೆದಿದೆ.




### ಸಾಕಾರಗೊಂಡ ಬಗೆ

ಅದು ಬೆಂಗಳೂರಿನ ಬಸವನಗುಡಿ ಬಡಾವಣೆಯ ಬಿ.ಪಿ.ವಾಡಿಯಾ ರಸ್ತೆಯಲ್ಲಿ ಇರುವ ಸರ್ಕಾರಿ ಶಾಲೆಗೆ ಸೇರಿದ ಜಮೀನು. ಈ ಶಾಲೆಯೊಂದಿಗೆ ಅದಮ್ಯ ಚೇತನ ಸಂಸ್ಥೆ 2001ರಿಂದಲೇ ಕಾರ್ಯನಿರ್ವಹಿಸುತ್ತಿದ್ದು, 'ಆಟಪಾಠ' ಕಾರ್ಯಕ್ರಮ ಆರಂಭವಾಗಿದ್ದು ಇದೇ ಶಾಲೆಯಿಂದ. 2003ರಿಂದ ಬಿಸಿಯೂಟ ಪೂರೈಸುತ್ತಿದೆ. ಈ ಶಾಲೆಯ ಹಿಂದೆ ಇರುವ ಒಂದಿಷ್ಟು ಜಾಗ ಕಸಸಂಗ್ರಹದಿಂದ ಪಾಳು ಬಿದ್ದಿತ್ತು. ಮುಂದೆ ಅದರಲ್ಲಿ ಒಂದಿಷ್ಟು ಪ್ರದೇಶ ರಸ್ತೆ ಅಗಲೀಕರಣಕ್ಕೆ ಹೋಯಿತು. ಉಳಿದ ಜಾಗದಲ್ಲಿ ಏನೂ ಮಾಡದಂಥ ಸ್ಥಿತಿ ಇದ್ದಾಗ ಅಲ್ಲೇ ಹಸಿರು ಹರಡುವ ನಿರ್ಧಾರ ಮಾಡಲಾಯಿತು. ಅದು ಸುಲಭದ ಕಾರ್ಯವಾಗೇನೂ ಇರಲಿಲ್ಲ. ಇಡೀ ಪ್ರದೇಶವನ್ನು ಸ್ವಚ್ಛ ಮಾಡಿ, ಐದಾರು ಲಾರಿ ಕಸ ಎತ್ತಲಾಯಿತು. ಐದಾರು ಟ್ರ್ಯಾಕ್ಟರ್‌ನಷ್ಟು ಮಣ್ಣು ಹಾಕಿ ಆ ಜಾಗವನ್ನು ಸಮತಟ್ಟುಗೊಳಿಸಲಾಯಿತು. ಆಗಷ್ಟೇ ಅನಂತ ಚತುರ್ದಶಿ ಸಂಪನ್ನಗೊಂಡಿತ್ತು.

ಪುಟ 4 ರಲ್ಲಿ ಮುಂದುವರಿದಿದೆ




ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6:10ಕ್ಕೆ ಮೈಸೂರು ಅಕಾಶವಾಣಿಯಿಂದ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್ ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ. ಪುರಾತನ ದೇವಾಲಯಗಳನ್ನು ಪರಿಚಯಿಸುವ ಈ ಸರಣಿಯಲ್ಲಿ ಈ ತಿಂಗಳು ಆಂಧ್ರಪ್ರದೇಶದ ಹೇಮಾವತಿಯ ಸಿದ್ದೇಶ್ವರ ದೇವಾಲಯ, ಹಿರೇ ಮಗಳೂರಿನ ಕೋದಂಡರಾಮ ದೇವಾಲಯ, ಪಟ್ಟದ ಕಲ್ಲಿನ ಪಾಪನಾಥ ದೇವಾಲಯ, ಲೇಪಾಕ್ಷಿಯ ವೀರಭದ್ರೇಶ್ವರ ದೇವಾಲಯ, ಚಿಕ್ಕಮಗಳೂರು ಜಿಲ್ಲೆಯ ದೇವನೂರಿನ ಲಕ್ಷ್ಮೀಕಾಂತ ದೇವಾಲಯವನ್ನು ಪರಿಚಯಿಸಲಾಯಿತು.













## ಅನಂತಕುಮಾರ್ ಅವರ ಕನಸಿನ ಸಸ್ಯಾಗ್ರಹ: ಅಯೋಧ್ಯೆಯಲ್ಲಿ 500ನೇ ಹಸಿರು ಭಾನುವಾರ

ದಿನಾಂಕ 27-07-2025 ರಂದು ಅಯೋಧ್ಯೆಯ ದಾಭಸೆಮ್ಮಾರ್ ಕಾಂಪ್ರೋಸಿಟ್ ಶಾಲೆಯ ಆವರಣದಲ್ಲಿ ಅದಮ್ಯ ಚೇತನದ 500ನೇ ಹಸಿರು ಭಾನುವಾರದ ಸಸ್ಯಾಗ್ರಹ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು.

ಅನಂತಕುಮಾರ್ ಅವರ ಕನಸಿನ ಸಸ್ಯಾಗ್ರಹ — ಮುಂದಿನ ಪೀಳಿಗೆಯ ಆರೋಗ್ಯಕ್ಕಾಗಿ ಗಿಡ ನೆಡುವ ಚಳವಳಿ ಎರಡು ಲಕ್ಷಕ್ಕೂ ಹೆಚ್ಚು ಗಿಡಗಳನ್ನು ನೆಡಿಸುವ ಮೂಲಕ ಐತಿಹಾಸಿಕ ಮೈಲಿಗಲ್ಲು ಸಾಧಿಸಿದೆ. ಹಸಿರು ಜೀವನದ ಬೀಜವನ್ನು ಜನಮನದಲ್ಲಿ ಬಿತ್ತಿದ ಈ ಚಳವಳಿ, ಪ್ರತಿ ಭಾನುವಾರ ಒಂದು ನವೀನ ಉತ್ಸಾಹದೊಂದಿಗೆ ಮುಂದುವರಿಯುತ್ತಿದೆ.

ಅನ್ನ, ಅಕ್ಷರ, ಆರೋಗ್ಯ ಎಂಬ ಧ್ಯೇಯವಾಕ್ಯದೊಂದಿಗೆ ಅದಮ್ಯ ಚೇತನ ಸಮಾಜಮುಖಿ ಕಾರ್ಯಗಳಲ್ಲಿ ನಿರತವಾಗಿದೆ. ಇದರಲ್ಲಿ, ಮುಂದಿನ ಪೀಳಿಗೆಗೆ ಹಸಿರು ಮತ್ತು ಆರೋಗ್ಯಕರ ಪರಿಸರವನ್ನು ಉಳಿಸುವ ಉದ್ದೇಶದಿಂದ ಆರಂಭವಾದ 'ಹಸಿರು ಭಾನುವಾರ' ಕಾರ್ಯಕ್ರಮ ವಿಶೇಷ ಸ್ಥಾನ ಪಡೆದಿದೆ. ಈ ಹಸಿರು ಕ್ರಾಂತಿಯ ಹಿಂದಿರುವ ಶಕ್ತಿ, ಅದಮ್ಯ ಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ನಿಸ್ವಾರ್ಥ ಸೇವೆ. ಜನರಿಗೆ ಮಾದರಿಯಾಗುವಂತೆ, ಅವರು ಕೀರ್ತಿಗಾಗಿ ಅಲ್ಲ, ಸಮಾಜಹಿತಕ್ಕಾಗಿ ಶ್ರಮಿಸುತ್ತಿರುವುದು ಎಲ್ಲರಿಗೂ ಸ್ಫೂರ್ತಿ. ತಾವು ಬರಲಾಗದ ಸಂದರ್ಭಗಳಲ್ಲಿಯೂ ಕೂಡ ಅವರ ಮಾರ್ಗದರ್ಶನದಲ್ಲಿ ಸ್ವಯಂಸೇವಕರು ಅದೇ ಶ್ರದ್ಧೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

500ನೇ ಸಸ್ಯಾಗ್ರಹದ ಕಾರ್ಯಕ್ರಮದಲ್ಲಿ, ರಾಯಚೂರು, ಕಲಬುರ್ಗಿ, ಹುಬ್ಬಳ್ಳಿ, ಸಿರ್ಸಿ, ಬೆಂಗಳೂರು ಹಾಗೂ ಇತರ ಪ್ರಾಂತ್ಯಗಳಿಂದ ಬಂದಿದ್ದ ಸ್ವಯಂಸೇವಕರು ಭಾಗವಹಿಸಿದ್ದರು. ಭಾರತೀಯ ಸಂಸ್ಕೃತಿಯ ಪ್ರತೀಕವಾದ ತಿಲಕವನ್ನಿಟ್ಟು, ಶಾಲು ಹಾಕಿ ಎಲ್ಲರನ್ನೂ ಗೌರವದಿಂದ ಸ್ವಾಗತಿಸಲಾಯಿತು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿದರು ಮತ್ತು ಎಲ್ಲರ ಸಹಯೋಗಕ್ಕೆ ಧನ್ಯವಾದ ಹೇಳಿದರು. ಅಯೋಧ್ಯೆಯ ವಿಶೇಷ ಸಸ್ಯಾಗ್ರಹದಲ್ಲಿ ಕರ್ನಾಟಕದ ಶಿರಸಿಯಿಂದ ತರಲಾದ "ಸೀತಾ ಅಶೋಕ" ಸಸಿಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಶ್ರೀಮತಿ ಲಲಿತಾ ಕುಮಾರ ಮಂಗಳಂ ಹಾಗೂ ಸೇವಾ ಇನ್‌ಎಕ್ಷನ್ ಸಂಸ್ಥಾಪಕಿ ಶ್ರೀಮತಿ ಇಂದುಮತಿ ಉಪಸ್ಥಿತರಿದ್ದು ಕಾರ್ಯಕ್ರಮದ ಗೌರವವನ್ನು ಹೆಚ್ಚಿಸಿದರು.



ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರೂ 'ಸೀತಾ ಅಶೋಕ' ಸಸಿಗಳನ್ನು ನೆಟ್ಟು ಸಂತಸಪಟ್ಟರು. ಸಂಜೆಯ ನಡೆದ ವಿಶೇಷ ಸಭೆಯಲ್ಲಿ ಶ್ರೀ ರಾಜೇಂದ್ರ ಹೆಗ್ಗಡೆ ಅವರು ಪ್ಲಾಸ್ಟಿಕ್ ಬಳಕೆಯಿಂದಾಗುವ ಹಾನಿ ಹಾಗೂ ಪರಿಸರ ಸಂರಕ್ಷಣೆಗಾಗಿ ಅನುಸರಿಸಬಹುದಾದ ಪರ್ಯಾಯಗಳನ್ನು ಮನಮುಟ್ಟುವಂತೆ ವಿವರಿಸಿದರು. ಅದಮ್ಯ ಚೇತನದ ಅಡಿಗೆಮನೆ ಪೆಟ್ರೋಲಿಯಂ ರಹಿತ, ಪರಿಸರ ಸ್ನೇಹಿ ಮಾದರಿಯಾಗಿ ಹೇಗೆ ರೂಪುಗೊಳ್ಳಬಹುದು ಎಂಬುದರ ಕುರಿತು ಪ್ರೇರಣಾದಾಯಕ ಚಿಂತನೆಗಳನ್ನು ಹಂಚಿಕೊಂಡರು.

ಅಯೋಧ್ಯೆಯ ಈ ಸಸ್ಯಾಗ್ರಹವು ಕೇವಲ ಗಿಡ ನೆಡುವ ಕಾರ್ಯಕ್ರಮವಾಗಿರದೆ, ಪರಿಸರ ಪ್ರೇಮ ಮತ್ತು ನಿಸ್ವಾರ್ಥ ಸೇವೆಯ ಸಂದೇಶವನ್ನು ದೇಶಾದ್ಯಂತ ಹರಡಲು ಒಂದು ಅವಕಾಶವಾಗಿತ್ತು. ಡಾ. ತೇಜಸ್ವಿನಿ ಅನಂತಕುಮಾರ್ ಅವರ ಈ ಮಹಾನ್ ಕಾರ್ಯಕ್ಕೆ ನಾವು ಆಭಾರಿಗಳಾಗಿದ್ದೇವೆ. 'ಹೂವಿನಿಂದ ನಾರು ಸ್ವರ್ಗಕ್ಕೆ ಸೇರಿತು' ಎಂಬಂತೆ, ಈ ಮಹೋನ್ನತ ಕಾರ್ಯದಲ್ಲಿ ಭಾಗವಹಿಸಿದ ನಮಗೆ ಧನ್ಯತಾಭಾವವನ್ನು ಮೂಡಿತು.

**-ಡಾ. ಲೀಲಾ ಬಸವರಾಜ್**

ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

# ಆಳದ ಬಾವಿಗೊಂದು ಭಾರದ ಬಿಂದಿಗೆ

**ಅಧ್ಯಾಯ-35**

ಕುಂದಗೋಳದಲ್ಲಿ 1940ರ ದಶಕದಿಂದ ಹಲವು ಹಿರಿಯರು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಶಾಖೆಯನ್ನು ನಿರಂತರವಾಗಿ ನಡೆಸುತ್ತಿದ್ದರು. ಆದರೆ ಕಾರಣಾಂತರಗಳಿಂದ 1960ರ ದಶಕದಲ್ಲಿ ಶಾಖಾ ಚಟುವಟಿಕೆಗಳು ನಿಂತವು. 1975ರಲ್ಲಿ ಶ್ರೀ ಕಾಶೀನಾಥ ಮಸ್ಕಿನ್ ರವರು ಹುಬ್ಬಳ್ಳಿಯಿಂದ ಬಂದು ಇಲ್ಲಿ ಮತ್ತೆ ಶಾಖೆ ನಡೆಸುವ ಪ್ರಯತ್ನ ಮಾಡಿದರು. ಎಪ್ಪತ್ತೈದರ ಆ ವೃದ್ಧರನ್ನು ಎಲ್ಲರೂ ಕಾಕಾ ಎಂದು ಕರೆಯುತ್ತಿದ್ದರು.

1975ರಲ್ಲಿ ಘೋಷಣೆಯಾದ ತುರ್ತುಪರಿಸ್ಥಿತಿ 1976ರಲ್ಲೂ ಮುಂದುವರಿದಿತ್ತು. ಸಂವಿಧಾನಕ್ಕೆ 42ನೆಯ ತಿದ್ದುಪಡಿ ತರುವ ನೆಪದಲ್ಲಿ ನ್ಯಾಯಾಂಗದ ಬಲವನ್ನು ಕುಗ್ಗಿಸಿ ಸರ್ವಾಧಿಕಾರವನ್ನು ಸ್ಥಾಪಿಸುವ ಹುನ್ನಾರ ನಡೆದಿತ್ತು. ನಾಗರಿಕ ಸ್ವಾತಂತ್ರ್ಯವನ್ನು ಕಸಿಯುವ ಸಿದ್ಧತೆಗಳೂ ನಡೆದಿದ್ದವು.



ಶ್ರೀ ಜಯಪ್ರಕಾಶ ನಾರಾಯಣ ಈ ತಿದ್ದುಪಡಿಯ ವಿರುದ್ಧ ಸಾರ್ವಜನಿಕ ಆಂದೋಲನಕ್ಕೆ ಕರೆಯಿತ್ತರು. ಕಾರ್ಯಕರ್ತರು ನಾಡಿನೆಲ್ಲೆಡೆ ಸಂಚರಿಸಿ ಸಂವಿಧಾನದ ತಿದ್ದುಪಡಿಯ ವಿರುದ್ಧ ಜನಜಾಗೃತಿ ಮೂಡಿಸತೊಡಗಿದ್ದರು. ಈ ವೇಳೆಗೆ ದ್ವಿತೀಯ ಪಿಯುಸಿ ತರಗತಿ ಓದುತ್ತಿದ್ದ ಅನಂತಕುಮಾರ್ ತಾವೂ ಧಾರವಾಡ ಜಿಲ್ಲೆಯ ಹಳ್ಳಿಹಳ್ಳಿಗಳಲ್ಲಿ ಸಂಚರಿಸುತ್ತ ಸರ್ಕಾರದ ಸರ್ವಾಧಿಕಾರಿ ಪ್ರವೃತ್ತಿಯ ಬಗೆಗೆ ಜನರಿಗೆ ತಿಳಿಯಹೇಳುವ ಕೆಲಸದಲ್ಲಿ ತೊಡಗಿದ್ದರು. ಹಾಗೆ ಅವರು ಪ್ರವಾಸ ಮಾಡುವಾಗ ಆಗಾಗ ಕುಂದಗೋಳಕ್ಕೂ ಬರುತ್ತಿದ್ದರು.

ಕಾಶೀನಾಥ ಮಸ್ಕಿನ್ ರವರ ಸೂಚನೆಯ ಮೇರೆಗೆ 1976ರಲ್ಲಿ ಅನಂತಕುಮಾರ್ ಸಂಘದ ಚಟುವಟಿಕೆಗಳ ಮೇಲ್ವಿಚಾರಣೆಗೆಂದು ವಿಸ್ತಾರಕ್ ಹೊಣೆಹೊತ್ತು ನಿಯಮಿತವಾಗಿ ಕುಂದಗೋಳಕ್ಕೆ ಬರತೊಡಗಿದರು. ಹಾಗೆ ಬರುತ್ತಿದ್ದವರು ಸಂಜೆ ಶಾಖೆ ಮುಗಿಸಿಕೊಂಡು ಹುಬ್ಬಳ್ಳಿಗೆ ಹಿಂತಿರುಗುತ್ತಿದ್ದರು. ಕುಂದಗೋಳದ ಸುತ್ತಲಿನ ಗ್ರಾಮಗಳಲ್ಲಿ ಸಂಘದ ಪ್ರಚಾರಕ್ಕೆ ತೆರಳುವಾಗ ರಾತ್ರಿ ತಡವಾದರೆ ಅಲ್ಲೇ ಕುಂದಗೋಳದಲ್ಲೇ ಉಳಿದುಕೊಳ್ಳುತ್ತಿದ್ದರು. ಅವರು ಹಾಗೆ ತಂಗುತ್ತಿದ್ದುದು ಗೆಳೆಯ ಅಶೋಕ ಪಾಳಂದೆಯ ಮನೆಯಲ್ಲಿ.

ಅಶೋಕ ಪಾಳಂದೆಯ ತಂದೆಯವರಿಗೂ ಅನಂತಕುಮಾರರಿಗೂ ವಯಸ್ಸಿನಲ್ಲಿ ಅದೆಷ್ಟೋ ಅಂತರವಿದ್ದರೂ ಅವರ ಒಡನಾಟ ತೀರಾ ಆತ್ಮೀಯವಾಗಿತ್ತು. ರಾತ್ರಿ ಎಷ್ಟೋ ಹೊತ್ತಿನವರೆಗೆ ಆ ಹಿರಿಯರೊಡನೆ ಅನಂತಕುಮಾರ ರಾಮಾಯಣ, ಮಹಾಭಾರತಗಳ ಬಗೆಗೆ ಚರ್ಚೆ ನಡೆಸಿದ್ದೂ ನಡೆಸಿದ್ದೇ. ಚರ್ಚೆಯ ಜತೆಜತೆಗೇ ನಿರಂತರವಾಗಿ ಎಲೆಯಡಿಕೆ ಜಗಿಯುವುದೂ ನಡೆಯುತ್ತಿತ್ತು. ಪುರಾಣಗಳಿಗೆ ಸಂಬಂಧಪಟ್ಟಂತೆ ತಮ್ಮ ತಂದೆಗೆ ಅಷ್ಟೆಲ್ಲ ತಿಳುವಳಿಕೆಯಿದೆಯೆನ್ನುವುದು ಮನೆಯ ಮಕ್ಕಳಿಗೇ ತಿಳಿಯದು. ಅನಂತಕುಮಾರರ ಉತ್ಸಾಹ ಆಸಕ್ತಿಗಳನ್ನು ಕಂಡು ಹಿರಿಯರಿಗೆ ಇನ್ನಷ್ಟು ಹುರುಪು. ರಾತ್ರಿ ಬಹು ಹೊತ್ತಿನವರೆಗೂ ಅವರ ಮಾತುಕತೆ ಸಾಗುತ್ತಿರುವುದು.

ಅಶೋಕನಸೋದರಿಯರಿಗೂಅನಂತಕುಮಾರನೆಂದರೆತುಂಬಅಭಿಮಾನ. ಕುಂದಗೋಳದ ಶಾಖೆಯ ಕಾರ್ಯಕ್ರಮಕ್ಕೆ ಅನಂತ ಬರುವಾಗಲೆಲ್ಲ ಅಶೋಕನ ಅಕ್ಕಂದಿರು ತುಂಬುಪ್ರೀತಿಯಿಂದ ಅವರಿಗೆ ಊಟಬಡಿಸುವರು. ಶಾಖೆ ಮುಗಿಸಿ ಅನಂತಕುಮಾರ ಅವರಿವರೊಡನೆ ಮಾತನಾಡುತ್ತ ಎಷ್ಟೋ ಹೊತ್ತು ಕಳೆದರೂ ರಾತ್ರಿಯೂಟಕ್ಕೆ ಬರುವುದು ಅಶೋಕನ ಮನೆಗೇ. ಅವರು ಬರುವವರೆಗೆ ಮನೆಯವರು ಕಾಯುತ್ತಿರುವರು.

ಹೀಗೊಂದು ದಿನ ಅನಂತಕುಮಾರ ಕುಂದಗೋಳಕ್ಕೆ ಬಂದು ರಾತ್ರಿ ಎಷ್ಟೋ ಹೊತ್ತಾದರೂ ಮನೆಗೆ ಬಂದಿರಲಿಲ್ಲ. ಅಶೋಕ ಮತ್ತವನ ಸೋದರಿಯರು ಕಾಯುತ್ತಲೇ ಇದ್ದರು. ರಾತ್ರೆ ಹನ್ನೊಂದಾದರೂ ಅನಂತ ಬರಲಿಲ್ಲವಾಗಿ ಮನೆಯವರಿಗೆ ಯೋಚನೆಯಾಯಿತು. ಬೇರೆಲ್ಲೂ ಆತ ಊಟಕ್ಕೆ ಹೋಗುವುದಿಲ್ಲವೆಂದು ಗೊತ್ತಿತ್ತು. ಹೀಗಾಗಿ ಅವರನ್ನು ಹುಡುಕಿಕೊಂಡು ಬರಲು ಅಶೋಕ ಹೋಗಬೇಕೆನ್ನುವಷ್ಟರಲ್ಲಿ ಅನಂತಕುಮಾರನ ಆಗಮನವಾಯಿತು.

ಸರಿ, ನಡುರಾತ್ರಿಯಲ್ಲಿ ಊಟಕ್ಕೆ ಸಿದ್ಧತೆಯಾಯಿತು. ಊಟಕ್ಕೆ ಕುಳಿತ ಅನಂತನನ್ನು ಪಾಳಂದೆಯ ಸೋದರಿ ಇಷ್ಟು ಹೊತ್ತಿನವರೆಗೆ ಎಲ್ಲಿದ್ದೆ ಎಂದು ಕೇಳಿದರು. ನನ್ನ ಸ್ನೇಹಿತನೊಬ್ಬ ಊರ ಸ್ಮಶಾನದಲ್ಲಿ ದೆವ್ವ ಓಡಾಡುತ್ತಿರುತ್ತದೆ ಎಂದು ಹೇಳಿದ್ದ. ಅದೇನು ನೋಡಿಬಿಡೋಣ ಅಂತ ಅವನನ್ನೂ ಕರೆದುಕೊಂಡು ಹೋಗಿ ಇಷ್ಟು ಹೊತ್ತು ಕೂತಿದ್ದೆ. ದೆವ್ವವೂ ಇಲ್ಲ, ಏನೂ ಇಲ್ಲ ಎಂದು ಅನಂತ ವಿವರಿಸತೊಡಗಿದರು.

ಅನಂತಕುಮಾರರ ಈ ಪ್ರಯೋಗದ ಬಗೆಗೆ ಪಾಳಂದೆ ಸೋದರಿಯರಿಗೆ ಕಿಂಚಿತ್ತೂ ಆಸಕ್ತಿ ಮೂಡಲಿಲ್ಲ. ಬದಲಿಗೆ ಗಾಬರಿಯೇ ಆಯಿತು. "ಅಂದರೆ, ಇಷ್ಟು ಹೊತ್ತೂ ಸ್ಮಶಾನಕ್ಕೆ ಹೋಗಿ ಕೂತಿದ್ದೆಯಾ? ಅಲ್ಲಿಂದ ಸೀದಾ ಮನಿಯೊಳಗ ಬಂದುಬಿಟ್ಟೆಯಾ? ನಡೀ ಹೊರಗ" ಎಂದವರೇ ಆಕೆ ಅನಂತಕುಮಾರನನ್ನು ಹೊರಗೆ ಹೋಗುವಂತೆ ಆದೇಶಿಸಿದರು. ಮನೆಯಂಗಳದ ಕಟ್ಟೆಯ ಮೇಲೆ ಕೂರುವಂತೆ ಹೇಳಿ ಒಂದು ಬಿಂದಿಗೆ ನೀರು ತಂದು ತಲೆಯ ಮೇಲೆ ಹೊಯ್ದು "ಇನ್ನು ಮೈಕೈ ಒರೆಸಿಕೊಂಡು ಊಟ ಮಾಡು ನಡಿ"ಎಂದರು.

ಕುಂದಗೋಳದಲ್ಲಿ ನೀರಿಗೆ ತತ್ವಾರ ಬಹಳ. ಪಾಳಂದೆ ಮನೆಯವರಿಗೂ ಈ ಕೊರತೆ ತಪ್ಪಿದ್ದಲ್ಲ. ಇನ್ನೂರು ಮೀಟರ್ ಆಚೆಗಿರುವ ಕಾಳೆಯವರ ಬಾವಿಯಿಂದ ನೀರು ಹೊತ್ತು ತರಬೇಕು. ಆ ಬಾವಿಯೋ ನೆಲಮಟ್ಟದಿಂದ ಎಂಬತ್ತು ಅಡಿ ಆಳ. ಕಾಳೆಯವರ ಮನೆ ಹಿತ್ತಿಲಿನಲ್ಲಿ ಇಟ್ಟ ದಪ್ಪ ಹಗ್ಗ ತೆಗೆದುಕೊಂಡು ಹೋಗಿ ಅರ್ಧ ಹಾದಿ ಮೆಟ್ಟಲಿಳಿದು ಬಾವಿಯನ್ನು ತಲುಪಬೇಕು. ರಾಟೆಗೆ ಹಗ್ಗ ಕಟ್ಟಿ ಕೊಡವಿಳಿಸಿ ನೀರು ಸೆಳೆಯುವುದೇ ದೊಡ್ಡ ಕಸರತ್ತು. ಅದಾದಮೇಲೆ ಏರುಹಾದಿಯಲ್ಲಿ ಭಾರಹೊತ್ತು ಪಾಳಂದೆಯ ಮನೆ ತಲುಪುವ ಹೊತ್ತಿಗೆ ಸಾಕಾಗಿಹೋಗುತ್ತದೆ.


ಅಶೋಕನೂ ಅವನ ಸೋದರಿಯರೂ ನೀರಿಗೆ ಹೋಗುವಾಗ ಅನಂತಕುಮಾರ ತಾವೂ ಹೊರಡುವರು. ಪಾಳಂದೆಯ ಮನೆಯಲ್ಲಿ ದೊಡ್ಡದೊಂದು ತಾಮ್ರದ ಕೊಡ. ಅಶೋಕನಂಥ ಕೃಶಕಾಯದವರಿಗೆ ಖಾಲಿ ಕೊಡವನ್ನೇ ಎತ್ತಲು ಸಾಧ್ಯವಿಲ್ಲ. ಅಂತಹುದರಲ್ಲಿ ಆ ಭಾರದ ಕೊಡವನ್ನೇ ಎತ್ತಿಕೊಂಡು ಅನಂತ ಹೊರಡುವರು.

ಆ ಬಾವಿಯೋ ಪಾತಾಳದಲ್ಲಿರುವಂತೆ ತೋರುವುದು. ಅದರಲ್ಲಿ ಇಳಿಸಬೇಕಾದ ಹಗ್ಗ ನೂರು-ನೂರಿಪ್ಪತ್ತು ಅಡಿ ಉದ್ದವಾದರೂ ಇದ್ದೀತು. ರಥೋತ್ಸವದಲ್ಲಿ ತೇರು ಎಳೆಯಲು ಬಳಸುವ ಹಗ್ಗದಂತೆ ದಪ್ಪವಾಗಿಯೂ ಭಾರವಾಗಿಯೂ ಇದ್ದ ಹಗ್ಗವನ್ನು ಬಾವಿಯ ಸಮೀಪದಲ್ಲಿದ್ದ ಗೆಳೆಯ ಚಂದ್ರಮೋಹನ ಕಾಳೆಯವರ ಮನೆಯ ಹಿತ್ತಲಿನಲ್ಲಿ ಇರಿಸಿದ್ದರು. ಸಾರ್ವಜನಿಕರು ಬಾವಿಯಿಂದ ನೀರು ತೆಗೆಯಲು ಬಂದವರು ಆ ಹಗ್ಗವನ್ನು ಉಪಯೋಗಿಸಿ ಮತ್ತೆ ಅಲ್ಲಿಯೇ ತಂದಿಟ್ಟು ಹೋಗುವರು.

ಪುಟ 4 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

## ಅನಂತವನಕ್ಕೆ ದಶಕದ ಸಾರ್ಥಕ ಸಂಭ್ರಮ






ಹಾಗಾಗಿ, 2015ರಲ್ಲಿ ಅನಂತಕುಮಾರ್ ಅವರ ಹುಟ್ಟುಹಬ್ಬಕ್ಕೆ ಗಿಡ ನೆಡುವ ಅಭಿಯಾನದ ಮೂಲಕ 'ಅನಂತ ವನ' ಸಾಕಾರರೂಪ ಪಡೆದುಕೊಂಡಿತು. ಅಂದು ಅನಂತಕುಮಾರ್ ಅವರು ರುದ್ರಾಕ್ಷಿಯ ಗಿಡ ನೆಟ್ಟರೆ, ಬಿಜೆಪಿ ಧುರೀಣ ಆರ್.ಅಶೋಕ್ ಅಶೋಕ ಗಿಡವನ್ನು ನೆಟ್ಟರು. ಹಿಮಾಲಯ ಪ್ರದೇಶದಲ್ಲಿ ಮಾತ್ರ ಬೆಳೆಯುವ ರುದ್ರಾಕ್ಷಿ ಬೆಂಗಳೂರಿನ ಪರಿಸರಕ್ಕೆ ಬೆಳೆಯುತ್ತದೆಯೋ, ಇಲ್ಲವೋ ಎಂಬ ಅಳುಕಿತ್ತು. ಆದರೆ, ಅನುಮಾನಗಳೆಲ್ಲ ದೂರವಾಗಿ ರುದ್ರಾಕ್ಷಿ ಸೇರಿದಂತೆ ಇತರ ಗಿಡಮರಗಳು ಹುಲುಸಾಗಿ ಬೆಳೆದಿವೆ.

ಮಧ್ಯದಲ್ಲಿ ರುದ್ರಾಕ್ಷಿ, ಅದರ ಸುತ್ತಲೂ ಬಿಲ್ವ, ಮುಂದಿನ ಸುತ್ತಿನಲ್ಲಿ ಕದಂಬ, ಕೊನೆಯ ಸುತ್ತಿನಲ್ಲಿ ಸೀತಾಅಶೋಕ ಗಿಡಗಳನ್ನು ನೆಡಲಾಯಿತು. ಕಾರ್ಯಕ್ರಮದಲ್ಲಿ ಡಾ.ವಾಮನಾಚಾರ್ಯ ಮತ್ತು ಯಲ್ಲಪ್ಪ ರೆಡ್ಡಿ ಅವರು ಪರಿಸರ ಸಂರಕ್ಷಣೆಯ ಅಗತ್ಯ ಮತ್ತು ಅದನ್ನು ಅನುಷ್ಠಾನಕ್ಕೆ ತರುವ ಬಗೆ ಹೇಗೆ ಎಂಬುದರ ಕುರಿತು ಮಾತನಾಡಿದರು. ಡಾ.ಅಶ್ವತ್ಥ್ ನಾರಾಯಣ್ ಅವರು ಉಪಸ್ಥಿತರಿದ್ದರು. ಲೋಕಸಭಾ ಸದಸ್ಯರು, ಶಾಸಕರು ಮತ್ತು ಅನಂತಕುಮಾರ್ ಗೆಳೆಯರು ಒಂದೊಂದು ಗಿಡವನ್ನು ನೆಟ್ಟರು. ನಂತರದ ದಿನಗಳಲ್ಲಿ ಆ ಗಿಡಗಳ ಪೋಷಣೆಗೆ ಕಾಳಜಿ ವಹಿಸಲಾಯಿತು. ಆಗಾಗ 'ಹಸಿರು ಭಾನುವಾರ' ಕಾರ್ಯಕ್ರಮಗಳನ್ನು ನಡೆಸಲಾಯಿತು. ಅದಮ್ಯ ಚೇತನದಲ್ಲಿ ಬಿಸಿಯೂಟ ತಯಾರಿಕೆ ವೇಳೆ ಅಕ್ಕಿ ತೊಳೆದ ನೀರನ್ನು ಇಲ್ಲಿ ಗಿಡಗಳಿಗೆ ಕಾಲಕಾಲಕ್ಕೆ ನೀಡಲಾಯಿತು. ಈಗ (ಹತ್ತು ವರ್ಷಗಳಲ್ಲಿ) ಕದಂಬ ವೃಕ್ಷ 50 ಅಡಿ ಎತ್ತರಕ್ಕೆ ಬೆಳೆದಿದೆ, ಸೀತಾಅಶೋಕ 20 ಅಡಿ ಎತ್ತರಕ್ಕೆ ತಲುಪಿದೆ, ರುದ್ರಾಕ್ಷಿ ಮರದಿಂದ ಸಾಕಷ್ಟು ರುದ್ರಾಕ್ಷಿಗಳು ದೊರೆತಿವೆ. ಪ್ರಧಾನಿ ನರೇಂದ್ರ ಮೋದಿಯವರು ತಮ್ಮ 75ನೇ ಹುಟ್ಟುಹಬ್ಬಕ್ಕೆ ಉಡುಗೊರೆಯಾಗಿ ಬಂದಿದ್ದ ಕದಂಬ ಸಸಿಯನ್ನು ಇತ್ತೀಚೆಗೆ ದೆಹಲಿಯ ಸರ್ಕಾರಿ ನಿವಾಸದಲ್ಲಿ ಖುದ್ದು ಅವರೇ ನೆಟ್ಟಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

### ದೂರದೃಷ್ಟಿ ಚಿಂತನೆಯ ಫಲ

ಇತ್ತೀಚಿನ ವರ್ಷಗಳಲ್ಲಿ ಅದರಲ್ಲೂ ಕಳೆದ ಹದಿನೈದು-ಇಪ್ಪತ್ತು ವರ್ಷಗಳಲ್ಲಿ ಜನ್ಮದಿನವನ್ನು ಜನಸಾಮಾನ್ಯರು ಮಾತ್ರವಲ್ಲ ರಾಜಕಾರಣಿಗಳೂ ಅದ್ದೂರಿಯಾಗಿ ಆಚರಿಸಿಕೊಳ್ಳುವ ಪರಿಪಾಠ ಬೆಳೆದಿದೆ. ಆದರೆ, ಜನ್ಮದಿನದ ಸಂದರ್ಭವನ್ನು ಸಮಾಜಮುಖಿಯಾಗಿಸಬೇಕು, ಪರಿಸರಕ್ಕೆ ಪೂರಕವಾಗಿ ಇರಬೇಕು ಎಂಬ ತಮ್ಮದೇ ಚಿಂತನೆಯನ್ನು ಅನುಷ್ಠಾನಕ್ಕೆ ತಂದವರು ಅನಂತಕುಮಾರ್ ಅವರು. ಹಾಗಾಗಿಯೇ ಇಂದು ಅನಂತವನ ಹಸಿರಿನ ಸಿರಿಯಾಗಿ ಕಂಗೊಳಿಸುತ್ತಿದೆ. ಮಾತ್ರವಲ್ಲ ಸ್ಪಷ್ಟ ಹಾಗೂ ವಿಶಿಷ್ಟ ಚಿಂತನೆಯ ನಾಯಕ ಕೈಗೊಳ್ಳುವ ಕಾರ್ಯಗಳು ಸಮಾಜದಲ್ಲಿ ಹೇಗೆ ಬದಲಾವಣೆಯ ತಾಜಾ ಅಲೆಯನ್ನು ಸೃಷ್ಟಿಸುತ್ತವೆ ಎಂಬುದಕ್ಕೆ ನಿದರ್ಶನ ಕೂಡ ಹೌದು. ಅನಂತಕುಮಾರ್ ಅವರು ಇಂದು ನಮ್ಮೊಂದಿಗೆ ಭೌತಿಕವಾಗಿ ಇಲ್ಲದಿರಬಹುದು. ಆದರೆ, ಅನಂತವನದಲ್ಲಿನ ಹಸಿರು, ಅಲ್ಲಿನ ಪರಿಸರ ಅವರ ನೆನಪನ್ನು, ಅವರ ಕಾಳಜಿಯನ್ನು ಸದಾ ನೆನಪಿಸುತ್ತದೆ, ಭವಿಷ್ಯದ ತಲೆಮಾರಿಗೆ ಪ್ರೇರಣೆ ನೀಡುತ್ತದೆ. ಸಮಾಜದ ಕೊರತೆಗಳ ಬಗ್ಗೆ ಬರೀ ಮಾತನಾಡುವುದಕ್ಕಿಂತ, ಅದನ್ನು ನಿವಾರಿಸಲು ಮುಂದಡಿ ಇಟ್ಟರೆ ಸಕಾರಾತ್ಮಕ ಬದಲಾವಣೆ ಸಾಧ್ಯ ಎಂಬುದನ್ನು ಅನಂತಕುಮಾರ್ ತಮ್ಮ ಕೆಲಸಗಳ ಮೂಲಕವೇ ತೋರಿಸಿಕೊಟ್ಟಿದ್ದಾರೆ. ಈ ನಿಸರ್ಗಸ್ನೇಹಿ ಕೆಲಸವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ವಿಸ್ತರಿಸಲು ಅದಮ್ಯ ಚೇತನ ಸಂಸ್ಥೆ 'ಹಸಿರು ಭಾನುವಾರ' ಕಾರ್ಯಕ್ರಮವನ್ನು ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ನಡೆಸಿಕೊಂಡು ಬರುತ್ತಿರುವುದು ಕೂಡ ಸಾಕಷ್ಟು ಯುವ ಮನಸ್ಸುಗಳಿಗೆ ಪ್ರೇರಣೆ ಒದಗಿಸುತ್ತಿದೆ. ಅನಂತಕುಮಾರ್ ಅವರ ಜನ್ಮದಿನದ ಮುನ್ನಾದಿನವಾದ ಸೆಪ್ಟೆಂಬರ್ 21ರಂದು 508ನೇ ಹಸಿರು ಭಾನುವಾರವನ್ನು ಬಿ.ಪಿ.ವಾಡಿಯಾ ರಸ್ತೆಯ ಅನಂತವನದಲ್ಲಿ ಆಚರಿಸಲಾಯಿತು. ಕಳೆದೊಂದು ದಶಕದಲ್ಲಿ ಆಗಿರುವ ಬದಲಾವಣೆ, ಹಸಿರು ಹಬ್ಬಿರುವ ಪರಿಯನ್ನು ಕಂಡು ಪರಿಸರಪ್ರೇಮಿಗಳು ಸಂತಸಪಟ್ಟರು. ಈಗಲೂ ಕಾಲ ಮಿಂಚಿಲ್ಲ. ಬೆಂಗಳೂರು ಸೇರಿದಂತೆ ಇತರ ನಗರಗಳಲ್ಲಿ ಮರಗಿಡಗಳನ್ನು ನೆಡುವ, ಅವುಗಳಿಗೆ ಸೂಕ್ತ ಪೋಷಣೆ ನೀಡುವ ಕೆಲಸ ಪರಿಣಾಮಕಾರಿಯಾಗಿ, ನಾಗರಿಕ ಆಂದೋಲನದ ಮಾದರಿಯಲ್ಲಿ ನಡೆದರೆ ಪರಿಸ್ಥಿತಿ ಒಂದಿಷ್ಟಾದರೂ ಸುಧಾರಿಸಬಹುದು.

ಪುಟ 3 ರಿಂದ

ಅನಂತ ದೊಡ್ಡ ಕೊಡದಲ್ಲಿ ಒಂದು ಸಲ ನೀರು ತಂದರೆ ತನ್ನ ಎರಡು ಸಲ ಓಡಿಯಾಟಕ್ಕೆ ಸಮವೆಂದು ಅಶೋಕನ ಲೆಕ್ಕಾಚಾರ. ಮೊದಲ ದಿನವೇ, 17 ವರ್ಷದ ಅನಂತ್‌ಕುಮಾರ್ ಅವರಿಗೆ ಆ ಕಷ್ಟ ಅರಿವಾಯಿತು. ಮರುದಿನದಿಂದಲೇ, ಪ್ರತಿದಿನ ಬೆಳಗ್ಗೆ ಎಲ್ಲರಿಗಿಂತ ಮೊದಲು ಎದ್ದು, ದಿನವೂ 35 ರಿಂದ 40 ಕೊಡಪಾನ ನೀರನ್ನು ತಂದು ತುಂಬಿಸಲು ಆರಂಭಿಸಿದರು. ಆ ಕೊಡದಿಂದ ನೀರು ಸೇದಿ ಹೆಗಲ ಮೇಲೆ ಹೊತ್ತು ಏರುದಾರಿಯಲ್ಲಿ ನಡೆದು ಪಾಳಂದೆಯ ಮನೆ ತಲುಪುವುದು ಆಡಿದ ಮಾತಿನಷ್ಟು ಸುಲಭವಲ್ಲ. ಈ ರೀತಿಯಾಗಿ ಹಲವು ಸಲ ನೀರೆಳೆದು ಹೊತ್ತು ಕೊನೆಯ ಸಲ ನೀರು ತುಂಬಿದ ಬಿಂದಿಗೆಯ ಜತೆಗೆ ಆ ಭಾರವಾದ ಹಗ್ಗವನ್ನೂ ಹೊತ್ತು ತರುವರು. ಕಾಳೆಯವರ ಹಿತ್ತಿಲಿನಲ್ಲಿ ಹಗ್ಗವನ್ನು ಇಳಿಸಿ, ಅಲ್ಲೇ ಕಟ್ಟೆಯ ಮೇಲೆ ಕುಳಿತು ಸುಧಾರಿಸಿಕೊಳ್ಳುವರು. ಅಷ್ಟರಲ್ಲಿ ಕಾಳೆಯವರ ಮನೆಯಿಂದ ಬಿಸಿ ಚಹಾ ಬರುವುದು. ಒಂದಿಷ್ಟು ಸಂಘದ ವಿಚಾರ, ಅದೂ ಇದೂ ಮಾತನಾಡಿ ಹೊರಟರೆ ಅಂದಿನ ಕರ್ತವ್ಯ ಮುಗಿದ ಹಾಗೆ. ಆದರೆ ಅನಂತಕುಮಾರ ಕಾರ್ಯದ ಶ್ರಮವನ್ನು ಎಂದೂ ಲೆಕ್ಕಿಸಿದವರೇ ಅಲ್ಲ. ಊಟವಿತ್ತ ಮನೆಗೊಂದಿಷ್ಟು ಸೇವೆ ಸಲ್ಲಿಸಿದ ತೃಪ್ತಿ ಅನಂತಕುಮಾರನಿಗಾದರೆ, ಕುಟುಂಬದ ಶ್ರಮದಲ್ಲಿ ಪಾಲುಗೊಂಡ ಆತನ ಆತ್ಮೀಯತೆಯ ಬಗೆಗೆ ಮನೆಯವರಿಗೆ ತುಂಬುಪ್ರೀತಿ. ಸುತ್ತಲಿನ ಹಳ್ಳಿಗಳಲ್ಲಿ ಸಂವಿಧಾನದ ನಲವತ್ತೆರಡನೆಯ ತಿದ್ದುಪಡಿಯ ವಿರುದ್ಧ ಪ್ರಚಾರ ನಡೆಸುವ, ಜನಜಾಗೃತಿ ಮೂಡಿಸುವ ಹೊಣೆಯೂ ಅನಂತಕುಮಾರರದ್ದೇ. ಕುಂದಗೋಳದ ಶಿಕ್ಷಕರೊಬ್ಬರ ಸೈಕಲ್ ಎರವಲುಪಡೆದು ಚಂದ್ರಮೋಹನ ಕಾಳೆಯನ್ನು ಮುಂದಿನ ಅಡ್ಡಕಂಬಿಯ ಮೇಲೆ ಕುಳ್ಳಿರಿಸಿಕೊಂಡು ನಾಲ್ಕಾರು ಕಿಲೋಮೀಟರ್ ಸುತ್ತಿದ್ದೂ ಸುತ್ತಿದ್ದೇ. ಹಳ್ಳಿಯವರು ಆರೆಂಟು ಜನರನ್ನು ಸೇರಿಸಿ ಸಂಘದ ಮಹತ್ವದ ಬಗೆಗೆ ಒಂದಿಷ್ಟು ಪರಿಚಯದ ಮಾತು ಹೇಳುವರು. ಹಳ್ಳಿಯವರು ಸುಮ್ಮನೆ ಕೇಳುವರು. ಪ್ರತಿಕ್ರಿಯೆ ಏನೂ ಇರುತ್ತಿರಲಿಲ್ಲ. ಆದರೂ ಅನಂತಕುಮಾರರಿಗೆ ನಿರುತ್ಸಾಹವೇನೂ ಆಗುತ್ತಿರಲಿಲ್ಲ. ಇನ್ನೊಂದು ಹಳ್ಳಿಯಲ್ಲಿ ಮತ್ತದೇ ಭಾಷಣ, ಮತ್ತದೇ ಮೂಕಪ್ರೇಕ್ಷಕರು! ಕಾಲಾಂತರದಲ್ಲಿ ಕುಂದಗೋಳದ ಶಾಖೆಯ ಹೊಣೆ ತಪ್ಪಿದ ಮೇಲೆ ಪಾಳಂದೆಯವರ ಮನೆಗೆ ಅನಂತಕುಮಾರರ ಭೇಟಿಯೂ ಕಡಿಮೆಯಾದದ್ದು ಸಹಜವೇ. ಮನೆಯ ಅಂಗಳದಲ್ಲಿರುವ ತಾಮ್ರದ ದೊಡ್ಡ ಕೊಡ ಮಾತ್ರ ಅವರ ಒಡನಾಟವನ್ನು ನೆನಪಿಸುತ್ತಲೇ ಇರುವುದು.

# ಅನಂತಕುಮಾರ್ – ಮರೆಯಲಾರದ ನೆನಪುಗಳು.

ನಾನು ಕಂಡಂತೆ



ಅನಂತಕುಮಾರ್

ನನ್ನ ಹಾಗೂ ಶ್ರೀ ಅನಂತಕುಮಾರ್ ನಡುವಿನ ಸ್ನೇಹವು ಸುಮಾರು ೪೫ ವರ್ಷಗಳ ಹಿಂದಿನದು. ಪ್ರಥಮ ಬಾರಿಗೆ ನಾವಿಬ್ಬರೂ ಭೇಟಿಯಾಗಿದ್ದು ೧೯೭೮-೭೯ ರಲ್ಲಿ ಬಳ್ಳಾರಿಯಲ್ಲಿ ನಡೆದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಅಭ್ಯಾಸವರ್ಗದಲ್ಲಿ. ಗದುಗಿನಿಂದ ನಾವು ಕೆಲವು ಕಾರ್ಯಕರ್ತರು ಭಾಗಿಯಾಗಿದ್ದೆವು. ಅಲ್ಲಿಯೇ ಶ್ರೀ ಅನಂತಕುಮಾರ್ ರವರು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಬಳ್ಳಾರಿಯ ಮೂರು ದಿನದ ಅಭ್ಯಾಸವರ್ಗದಲ್ಲಿ ಪ್ರಮುಖ ನಾಯಕರಾದ ಶ್ರೀಯುತ ದತ್ತಾತ್ರೇಯ ಹೊಸಬಾಳೆ, ಅಚ್ಯುತ ಲಿಮಯೆ, ದಿ. ರಾಜೇಂದ್ರ ಗೋಖಲೆ, ಅನಿಲ್ ಸಹಸ್ರಬುದ್ಧೆ, ವಿಷ್ಣುಕಾಂತ ಚಟಪಲ್ಲಿ, ಕೆ ಎನ್ ಗೋವಿಂದಾಚಾರ್ಯ ಇತ್ಯಾದಿಗಳ ಪರಿಚಯವಾಯಿತು. ಚರ್ಚೆಗಳು ನಡೆದಾಗ ವಿಷಯ ಪ್ರತಿಪಾದನೆಯ ಹಂತದಲ್ಲಿ ಆಯಾ ಸಂದರ್ಭಕ್ಕನುಸಾರವಾಗಿ ಉದಾಹರಣೆ ರೂಪದಲ್ಲಿ ನಾನು ಹೇಳುತ್ತಿದ್ದ ಸಂಸ್ಕೃತ ಶ್ಲೋಕಗಳನ್ನು ದಿ. ಶ್ರೀ ಅನಂತಕುಮಾರ್ ಸಹಿತವಾಗಿ ಪ್ರತಿಯೊಬ್ಬರೂ ಆಸ್ವಾದಿಸಿದರು. ಹಾಗೆಯೇ ನಮ್ಮಿಬ್ಬರ ಬಾಂಧವ್ಯವೂ ಬೆಳೆಯಿತು.

ಶ್ರೀ ಅನಂತಕುಮಾರ್ ರವರು ಸ್ನೇಹಜೀವಿ. ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುವ ಸ್ವಭಾವದವರು. ಯಾವುದೇ ಕಾರ್ಯಕ್ರಮವಿರಲಿ ಅದು ಅಚ್ಚುಕಟ್ಟಾಗಿ ಪ್ರಾರಂಭದಿಂದ ಮುಕ್ತಾಯದವರೆಗೂ ಸಮಯಕ್ಕನುಸಾರವಾಗಿ ನಡೆಯಬೇಕೆಂದು ಬಯಸುತ್ತಿದ್ದರು ಹಾಗೂ ಆಯೋಜಕರಿಗೆ ಯೋಗ್ಯ ಸಲಹೆ ಸೂಚನೆಗಳನ್ನು ಕೊಟ್ಟು ಅವರನ್ನು ಹುರಿದುಂಬಿಸುತ್ತಿದ್ದರು. ಸಾಮಾನ್ಯ ಕಾರ್ಯಕರ್ತರನ್ನು ಹೆಚ್ಚಿನ ಜವಾಬ್ದಾರಿಯನ್ನು ನಿಭಾಯಿಸುವ ನಿಟ್ಟಿನಲ್ಲಿ, ನಾಯಕರಾಗಿ ಬೆಳೆಸುವಲ್ಲಿ ಶ್ರಮವಹಿಸಿದರು. ರಾಜ್ಯದೆಲ್ಲೆಡೆ ಸುತ್ತಾಡಿ ಕಾರ್ಯಕರ್ತರ ಸಂಖ್ಯೆಯನ್ನು ಹೆಚ್ಚಿಸಿದರು, ಎಲ್ಲಿ ಕಾರ್ಯಾಲಯಗಳು ಇರಲಿಲ್ಲವೋ ಅಲ್ಲಿ ಪ್ರಾರಂಭ ಮಾಡಿಸಿದರು. ಬೇರೆ ಬೇರೆ ಕಾರ್ಯಕ್ರಮಗಳನ್ನು ಆಯೋಜಿಸಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಕಡಿಮೆ ಮಾಡಿದರು ಹಾಗೂ ಸಮಾಜದ ಜಾಗೃತಿಗಾಗಿ ಸಮಕಾಲೀನ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಚಳವಳಿ ಮಾಡಿದರು. ರಾಷ್ಟ್ರೀಯ ಹಿತಾಸಕ್ತಿಗಾಗಿ ಸದಾ ಚಿಂತಿಸುತ್ತಿದ್ದರು. ಇವರ ಮಾರ್ಗದರ್ಶನದಲ್ಲಿ ಬೆಳೆದು ರಾಷ್ಟ್ರ ಹಿತವನ್ನು ಮೈಗೂಡಿಸಿಕೊಂಡ ಗದಗ ಶಾಖೆಯ ಸಾಕಷ್ಟು ಕಾರ್ಯಕರ್ತರು ರಾಜ್ಯಮಟ್ಟದ ವಿವಿಧ ಸ್ತರಗಳಲ್ಲಿ ಕೆಲಸ ಮಾಡಿದರು. ನಮ್ಮೆಲ್ಲರನ್ನೂ ದಿ. ಶ್ರೀ ಅನಂತಕುಮಾರ್ ಆದಿಯಾಗಿ ಎಲ್ಲರೂ ಗದಗ ರಾಷ್ಟ್ರದವರು ಎಂದು ಕರೆಯುತ್ತಿದ್ದರು. ಒಂದುಸಾರೆ ಸಹಲ್ ಕಾರ್ಯಕ್ರಮವನ್ನು ಗದುಗಿನ ಸಮೀಪದ ಬಿಂಕದಕಟ್ಟಿಯಲ್ಲಿ ನಡೆಸಿದೆವು. ಅದಕ್ಕೆ ಶ್ರೀ ಅನಂತಕುಮಾರ್ ಹಾಗೂ ದಿ. ರಾಜೇಂದ್ರ ಗೋಖಲೆ ಯವರು ಬಂದಿದ್ದರು. ಕಾರ್ಯಕ್ರಮ ಮುಗಿದಮೇಲೆ ಅವರಿಬ್ಬರು ಹಾಗೂ ನಾವೆಲ್ಲರೂ ಪಾದಚಾರಿಯಾಗಿ ( ೩ ಕಿ ಮೀ) ವಾಪಸ್ ಬಂದೆವು. ಅವರನ್ನು ನಡೆಸುತ್ತಾ ಗದುಗಿನವರೆಗೂ ಕರೆದುಕೊಂಡು ಬಂದದ್ದು ಇನ್ನೂ ನೆನಪಿನಲ್ಲಿ ಹಸಿರಾಗಿದೆ.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನ ಯಾವುದೇ ಕಾರ್ಯಕ್ರಮವಿರಲಿ ಸಮಯ ಪರಿಪಾಲನೆಯು ಅತ್ಯಂತ ಪ್ರಾಮುಖ್ಯವಾದದ್ದು. ಒಂದು ಉದಾಹರಣೆ ಕೊಡಬೇಕೆಂದರೆ ಅಭಾವಿಪ ೨೭ನೆಯ ರಾಷ್ಟ್ರೀಯ ಅಧಿವೇಶನವು ಹುಬ್ಬಳ್ಳಿ ಯಲ್ಲಿ ೧೯೭೯ ನವಂಬರ್ ೬, ೭, ೮ ರಂದು ನಡೆಯಿತು. ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕರ್ನಾಟಕ ವಿಶ್ವ ವಿದ್ಯಾಲಯದ ಅಂದಿನ ಕುಲಪತಿ ಗಳಾಗಿದ್ದ ಡಾ. ಡಿ ಎಮ್ ನಂಜುಡಪ್ಪನವರನ್ನು ಆಹ್ವಾನಿಸಲಾಗಿತ್ತು. ಕಾರ್ಯಕ್ರಮ ಪ್ರಾರಂಭವಾಗುವ ಸಮಯಕ್ಕಿಂತಲೂ ಸ್ವಲ್ಪ ತಡವಾಗಿ ಡಾ. ನಂಜುಂಡಪ್ಪನವರು ಬಂದರು. ಆದರೆ ಸಮಯಕ್ಕನುಸಾರವಾಗಿ ಕಾರ್ಯಕ್ರಮವು ಅವರಿಲ್ಲದೆ ಪ್ರಾರಂಭವಾಯಿತು. ಸಮಯ ಪರಿಪಾಲನೆ ವಿಷಯದಲ್ಲಿ ಅಭಾವಿಪ ವನ್ನು ಅತಿಥಿಗಳು ಸಿಟ್ಟಾಗುವ ಬದಲು ಶ್ಲಾಘಿಸಿದರು. ಆ ಕಾರ್ಯಕ್ರಮದಲ್ಲಿ ಚೋ. ರಾಮಸ್ವಾಮಿ ಯವರೂ ಉಪಸ್ಥಿತರಿದ್ದರು.

ಶ್ರೀ ಅನಂತಕುಮಾರ್ ರವರು ಅವಿವಾಹಿತರಾಗಿದ್ದ ಸಮಯದಲ್ಲಿ ಹುಬ್ಬಳ್ಳಿಯ ಅವರ MTS ಕಾಲೋನಿಯ ಮನೆಗೆ ಒಂದು ಸಾರೆ ನಾನು ಹೋಗಿದ್ದೆ. ಅತ್ಯಂತ ಆತ್ಮೀಯತೆಯಿಂದ ಊಟಕ್ಕೆ ಹಾಕಿ ಕಳಿಸಿದರು. ಅವರಿಗೆ ನಾನು ಒಂದು ಪತ್ರವನ್ನು "ಸಂಸ್ಕೃತ" ದಲ್ಲಿ ಬರೆದಿದ್ದೆ. इदम मम जीवमाने मया लिखितम संस्कृत पत्रम. ಎಂದು ಪತ್ರವನ್ನು ಮುಗಿಸಿದ್ದೆ. ಅದನ್ನು ಎಲ್ಲರಿಗೂ ಹೇಳಿ ಸಂತೋಷ ಪಟ್ಟಿದ್ದರು. ನನ್ನ ಪತ್ರವನ್ನು ಕಾದಿಡುತ್ತೇನೆ ಎಂದಿದ್ದರು. ಅವರ ತಂದೆಯವರು ರೇಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಹಾಗೂ ಮಾತೋಶ್ರೀಯವರು ಆಗ ಮಹಾನಗರ ಪಾಲಿಕೆಯ ಸದಸ್ಯರಾಗಿದ್ದರು. ಕರ್ನಾಟಕದ ಯಾವುದೇ ಕಾರ್ಯಕರ್ತರು ಅಖಿಲ ಭಾರತೀಯ ಅಧಿವೇಶನಗಳಿಗೆ ಬೇರೆ ಬೇರೆ ರಾಜ್ಯಗಳಿಗೆ ತೆರಳುವಾಗ ಅವರಿಗೆ ಬೇಕಾದ ರೇಲ್ವೆ ಟಿಕೆಟ್ಟುಗಳನ್ನು ವಿದ್ಯಾರ್ಥಿಗಳ ರಿಯಾಯಿತಿ ದರದಲ್ಲಿ ಮುಂಗಡವಾಗಿ ತೆಗೆದಿರಿಸುತ್ತಿದ್ದರು.

ಶ್ರೀ ಅನಂತಕುಮಾರ್ ರವರು ವ್ಯಕ್ತಿತ್ವ ವಿಕಸನ ಮತ್ತು ಅದನ್ನು ಆಚರಣೆಗೆ ತರುವ ಅಗತ್ಯವನ್ನು ಮನಗಂಡಿದ್ದರು. ಆ ದಿಶೆಯಲ್ಲಿ ಜನಜಾಗೃತಿ ಮೂಡಿಸುವ, ವ್ಯಕ್ತಿತ್ವ ನಿರ್ಮಾಣ ಮಾಡುವ ಅನೇಕ ಶಿಬಿರಗಳನ್ನು, ಕಾರ್ಯಾಗಾರಗಳನ್ನು ನಡೆಸಿದರು. ಶ್ರೀಯುತರ ಬಗ್ಗೆ ಕೆಲವೇ ಮಾತುಗಳಲ್ಲಿ ಹೇಳುವುದು ಅಸಾಧ್ಯ. ಅನಂತಕುಮಾರ್ ಪ್ರತಿಷ್ಠಾನವು ಅವರ ಕಾರ್ಯಗಳನ್ನು ಮುಂದುವರೆಸುವ ನಿಟ್ಟಿನಲ್ಲಿ ಉತ್ತಮ ಕೆಲಸ ಮಾಡುತ್ತಿದೆ. ಸಂಬಂಧಿಸಿದ ಎಲ್ಲ ಪದಾಧಿಕಾರಿಗಳಿಗೆ ನನ್ನ ಧನ್ಯವಾದಗಳು.

**-ಗಣಪತಿ ಅನಂತ ಭಟ್ಟ ಸೊರಟೂರು**
**ನಿವೃತ್ತ ಮುಖ್ಯ ವ್ಯವಸ್ಥಾಪಕರು, ಎಸ್. ಬಿ. ಐ**

## ನಿತ್ಯ ಅನ್ನದಾನ


ಅದಮ್ಯಚೇತನದ ವತಿಯಿಂದ ಬೆಂಗಳೂರಿನ ವಿವಿಧ ಬಡಾವಣೆಯಲ್ಲಿ ನಿತ್ಯ ಅನ್ನದಾನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದ್ದು, ಗವಿಪುರ, ನಗರ್ತಪೇಟೆ, ಮಾರೇನಹಳ್ಳಿ, ಜಯನಗರ, ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಹಲಸೂರು ಅನಂತ ಸ್ಮೃತಿ ವನ (ಲಾಲ್ಬಾಗ್) ಮೊದಲಾದ ಕಡೆಗಳಲ್ಲಿ ಅಗತ್ಯವಿರುವ ಜನರು ರುಚಿಕರವಾದ ಭೋಜನಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇದಲ್ಲದೆ ಅಯೋಧ್ಯೆ ಮತ್ತು ಕಲಬುರಗಿ, ಹುಬ್ಬಳ್ಳಿ ನಗರಗಳಲ್ಲಿಯೂ ಸಹ ಅನ್ನದಾನ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ.













# ಭಾರತದ ಹೆಮ್ಮೆಯ ಸಿಂಹಿಣಿಯರು






ವಿಶ್ವಮಟ್ಟದಲ್ಲಿ ವನ್ಯಜೀವಿಗಳ ರಕ್ಷಣೆಗೆ ಮೇ 3ರ ಒಂದು ದಿನವನ್ನು ನಿಗದಿಪಡಿಸಲಾಗಿದೆ. ನಮ್ಮ ರಾಷ್ಟ್ರ (ಮತ್ತು ಆಸ್ಟ್ರೇಲಿಯಾ)ದ ವಿಶೇಷ ಏನೆಂದರೆ ವನ್ಯ ರಕ್ಷಣೆಗೆ ಒಂದಿಡೀ ವಾರವನ್ನೇ ಮೀಸಲಿಟ್ಟಿದ್ದೇವೆ. ಅಕ್ಟೋಬರ್ 2ರಿಂದ 8ರವರೆಗೆ ನಾವು ವನ್ಯಜೀವಿ ಸಪ್ತಾಹವನ್ನು ಆಚರಿಸುತ್ತೇವೆ. ವನ್ಯಜೀವಿಗಳ ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂಬುದನ್ನು ಸಂವಿಧಾನದಲ್ಲೇ ಅಳವಡಿಸಿಕೊಂಡ ರಾಷ್ಟ್ರ ನಮ್ಮದು. ಅಳಿವಿನಂಚಿಗೆ ಸಾಗುತ್ತಿದ್ದ ಹುಲಿ, ಆನೆ, ಸಿಂಹಗಳ ಸಂಖ್ಯೆಯನ್ನು ನಾವು ಮತ್ತೆ ಗಣನೀಯವಾಗಿ ಹೆಚ್ಚಿಸಿದ್ದೇವೆ. ಅವಷ್ಟೇ ಅಲ್ಲ, ಒಂಟಿಕೊಂಬಿನ ಘೇಂಡಾ, ಘಡಿಯಾಲ್ ಮೊಸಳೆ, ಬಾರಾ ಸಿಂಘಾ ಮತ್ತು ನದಿಗಳ (ಸಿಹಿನೀರಿನ) ಡಾಲ್ಫಿನ್‌ಗಳ ಸಂಖ್ಯೆಯೂ ಹೆಚ್ಚುತ್ತಿವೆ.

ಈ ಯಶಸ್ಸಿನಲ್ಲಿ ಸಿಂಹಪಾಲು ಯಾವ ಪ್ರಾಣಿಯದು ಗೊತ್ತೆ? ಗಿರ್ ಅರಣ್ಯದ ಸಿಂಹಗಳದ್ದು! ನಮ್ಮ ಹೆಮ್ಮೆ, ಶೌರ್ಯ ಮತ್ತು ರಾಷ್ಟ್ರಾಭಿಮಾನದ ಸಂಕೇತವಾಗಿ ಮೆರೆಯುತ್ತಿದ್ದ ಸಿಂಹ ಈಗ ವನ್ಯಸಂರಕ್ಷಣಾ ಸಾಧನೆಯ ಸಂಕೇತವೂ ಆಗಿದೆ. ಎಪ್ಪತ್ತರ ದಶಕದಲ್ಲಿ 200ಕ್ಕಿಂತ ಕಡಿಮೆ ಇದ್ದ ಏಷ್ಯಾಟಿಕ್ ಸಿಂಹಗಳ ಸಂಖ್ಯೆ ಈಗ 890ಕ್ಕೆ ಏರಿದೆ! ವಿಶಿಷ್ಟ ಸಂಗತಿ ಏನೆಂದರೆ ಗುಜರಾತ್ ಬಿಟ್ಟರೆ ಬೇರೆ ಯಾವ ರಾಜ್ಯದಲ್ಲೂ ಅಥವಾ ಬೇರೆ ಯಾವ ರಾಷ್ಟ್ರದಲ್ಲೂ ಇವು ಇಲ್ಲ. ಈ ಯಶಸ್ಸಿನ ದೊಡ್ಡ ಪಾಲು ಅಲ್ಲಿನ ಸಿಂಹಿಣಿಯರಿಗೆ ಸೇರುತ್ತದೆ. ಸಿಂಹಗಳ ರಕ್ಷಣೆಗೆಂದೇ ಅಲ್ಲಿ ಪ್ರತ್ಯೇಕ ಮಹಿಳಾ ಅರಣ್ಯಾಧಿಕಾರಿಗಳ ಪಡೆಯನ್ನೇ ಕಟ್ಟಲಾಗಿದ್ದು ಅವರೇ ಅರಣ್ಯಗಳ ಸಹಜ ಪರಿಸರದಲ್ಲಿ ಸಿಂಹಗಳಿಗೆ ಬೇಕಾದ ಬಲಿ ಜೀವಿಗಳನ್ನೂ ಅವುಗಳಿಗೆ ಬೇಕಾದ ಹುಲ್ಲುಗಾವಲನ್ನೂ ರಕ್ಷಣೆ ಮಾಡುತ್ತಿದ್ದಾರೆ. ಸಿಂಹಗಳು ಕಾದಾಟದಲ್ಲಿ ಗಾಯಗೊಂಡರೆ ಅಥವಾ ಗಡಿದಾಟಿ ಹಳ್ಳಿಗಳಿಗೆ ನುಗ್ಗಿದರೆ ತುರ್ತು ನೆರವಿಗೂ ಧಾವಿಸುವ ಈ ಮಹಿಳೆಯರ ಸಾಹಸಗಳ ಬಗ್ಗೆ ಜಾಗತಿಕ ಶ್ಲಾಘನೆ ಲಭಿಸಿದೆ. ಸಿಂಹಕ್ಕೆ ಕಾಡಿನ ರಾಜ ಎಂಬ ಬಿರುದಿದ್ದರೆ ಈ ಮಹಿಳೆಯರು ಕಾಡಿನ ರಾಣಿಯರು ಎಂದು ಪ್ರಸಿದ್ಧಿ ಪಡೆದಿದ್ದಾರೆ.

ತಮಾಷೆ ಏನು ಗೊತ್ತೆ? ಸಿಂಹಗಳಲ್ಲೂ ಬೇಟೆಯಾಡುವ ಮತ್ತು ಸಂತಾನಸಂಗೋಪನೆಯ ಕೆಲಸಗಳೆಲ್ಲ ಸಿಂಹಿಣಿಯರದ್ದೇ ಆಗಿರುತ್ತದೆ. ಗಂಡು ಸಿಂಹಗಳ ಕೆಲಸ ಏನಿದ್ದರೂ ಯಜಮಾನಿಕೆ ಅಷ್ಟೆ. ಇನ್ನೊಂದು ಸ್ವಾರಸ್ಯದ ಸಂಗತಿ ಏನೆಂದರೆ ಸಿಂಹ, ಸಿಂಗ್, ಅಥವಾ ಸಿನ್ಹಾ ಮುಂತಾದ ವಂಶನಾಮಗಳು ಸಿಂಹಗಳೇ ಇಲ್ಲದ ಪಂಜಾಬ್, ಹರ್ಯಾಣಾ, ರಾಜಸ್ತಾನ್, ಉತ್ತರ ಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶಗಳಲ್ಲಿ ಪ್ರಚಲಿತ ಇದೆ. ಗುಜರಾತವೊಂದೇ ಸಿಂಹಗಳ ನೆಲೆಯಾಗಿದ್ದರೂ ಗುಜರಾತಿಗಳಲ್ಲಿ ಅಂಥ ವಂಶನಾಮ ಇಲ್ಲ!

# ಅಬ್ದುಲ್ ಕಲಾಂ ನೆನಪಿನ ಜಾಗತಿಕ 'ವಿದ್ಯಾರ್ಥಿ ದಿನ'






ಸೆಪ್ಟಂಬರ್ 15 ಅಂದರೆ ಭಾರತರತ್ನ ಸರ್ ಎಮ್ ವಿಶ್ವೇಶ್ವರಯ್ಯನವರ ಜನ್ಮದಿನವನ್ನು ಎಂಜಿನಿಯರ್‌ಗಳ ದಿನ ಎಂದು ಆಚರಿಸುತ್ತೇವೆ. ಅಕ್ಟೊಬರ್ 15ನ್ನು ಇನ್ನೊಬ್ಬ ಭಾರತ ರತ್ನ ಎಪಿಜೆ ಅಬ್ದುಲ್ ಕಲಾಂ ಅವರ ಜನ್ಮದಿನವನ್ನು ಜಾಗತಿಕ ವಿದ್ಯಾರ್ಥಿ ದಿನ ಎಂದು ಆಚರಿಸಲಾಗುತ್ತದೆ. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವುದೆಂದರೆ ಕಲಾಂ ಸರ್ ಅವರಿಗೆ ತುಂಬ ಇಷ್ಟದ ಕೆಲಸವಾಗಿತ್ತು.

ವಿಶೇಷ ಏನೆಂದರೆ, ಭಾರತದ ಮೊದಲ ಬ್ರಹ್ಮಚಾರಿ ಪ್ರಧಾನ ಮಂತ್ರಿಯವರ (ಅಟಲ್ ಬಿಹಾರಿ ವಾಜಪೇಯಿ) ಅವಧಿಯಲ್ಲಿ ಭಾರತದ ಮೊದಲ ಬ್ರಹ್ಮಚಾರಿ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಅವರು ಭಾರತದ ಮೊದಲ ವಿಜ್ಞಾನಿ ರಾಷ್ಟ್ರಪತಿಯೂ ಹೌದು. ಮೌಲ್ವಿಯೊಬ್ಬರ ಮಗನಾಗಿ ರಾಮೇಶ್ವರದಲ್ಲಿ ಜನಿಸಿದ ಅವರು ವಿದ್ಯಾರ್ಥಿ ಆಗಿದ್ದಾಗ ಮನೆಮನೆಗೆ ಪತ್ರಿಕೆಗಳ ವಿತರಣೆ ಮಾಡುತ್ತಿದ್ದರು. ವೀಣೆ ನುಡಿಸುವಲ್ಲಿ ಪಾರಂಗತರಾದ, ಮಾಂಸ, ಮದ್ಯವನ್ನು ಎಂದೂ ಸೇವಿಸದ, ಎಲ್ಲ ಧರ್ಮಗಳ ಬಗೆಗೂ ಗೌರವದ ನಿಲುವನ್ನು ತಾಳಿದ ಅವರು ಸರ್ವಧರ್ಮ ಸಮಾನತೆಯನ್ನು ಪ್ರತಿಪಾದಿಸುತ್ತಿದ್ದರು.

"ಮಹಾನ್ ವ್ಯಕ್ತಿಗಳಿಗೆ ಧರ್ಮ ಎಂದರೆ ಮೈತ್ರಿಯ ಸಾಧನವಾದರೆ, ಅಲ್ಪರಿಗೆ ಅದು ಬಡಿದಾಡುವ ಸಾಧನವಾಗುತ್ತದೆ" ಎಂದು ಹೇಳಿದ್ದರು. ಪರಿಸರ ಸಂರಕ್ಷಣೆ ಕುರಿತು ಅವರಿಗೆ ಅಪಾರ ಕಾಳಜಿ ಇತ್ತು. ಬದುಕಿ ಬಾಳಲು ಯೋಗ್ಯವಾದ ಭೂಗ್ರಹವನ್ನು ರೂಪಿಸಿಕೊಳ್ಳುವುದು ಹೇಗೆ? ಎಂಬ ವಿಷಯದ ಮೇಲೆ ಅವರು ಹತ್ತು ವರ್ಷಗಳ ಹಿಂದೆ (27 ಜುಲೈ 2015) ಶಿಲ್ಲಾಂಗ್‌ನಲ್ಲಿ ಮಾತಾಡಲು ಆರಂಭಿಸಿದಾಗಲೇ ಅವರ ಪ್ರಾಣಪಕ್ಷಿ ಹಾರಿಹೋಯಿತು. ಹಿಮಾಚಲ ಪ್ರದೇಶದ ಒಂದು ಹಿಮಪರ್ವತಕ್ಕೆ ಮತ್ತು ಬಂಗಾಳ ಉಪಸಾಗರದ ಒಂದು ದ್ವೀಪಕ್ಕೆ ಅವರ ಹೆಸರನ್ನಿಡಲಾಗಿದೆ.

# ಒಂಭತ್ತು ಮಿದುಳುಗಳ, ಎಂಟು ಕೈಗಳ ಬಂಟ





ಸಮುದ್ರದಲ್ಲಿ ಜೀವಿಸುವ ಅಕ್ಟೊಪಸ್ (ಅಷ್ಟಪಾದಿ) ಜೀವಿಯ ಚಮತ್ಕಾರವನ್ನು ಎಷ್ಟು ವರ್ಣಿಸಿದರೂ ಸಾಲದು. ಅದರ ಎಂಟೂ ತೋಳುಗಳು ಏಕಕಾಲದಲ್ಲಿ ಎಂಟು ವಿಭಿನ್ನ ಕೆಲಸಗಳನ್ನು ಮಾಡಬಲ್ಲವು. ಬೇಟೆ ಸಿಕ್ಕಾಗ ಒಂದೆರಡು ತೋಳುಗಳು ನೀಲಿಬಣ್ಣದ ಶಾಯಿಯನ್ನು ಆ ಬಡಪಾಯಿಯತ್ತ ಕಕ್ಕುತ್ತವೆ; ಇನ್ನು ಕೆಲವು ತೋಳುಗಳು ಅದನ್ನು ಹಿಡಿದು ಕೊಕ್ಕಿನಂಥ ಬಾಯಿಗೆ ತುರುಕುತ್ತವೆ. ಕೊಕ್ಕು ಆಗಾಗ ವಿಷವನ್ನೂ ಹೊಮ್ಮಿಸಿ ಬೇಟೆಯನ್ನು ನಿಷ್ಕ್ರಿಯ ಮಾಡುತ್ತದೆ. ಅಂದಹಾಗೆ, ಕೊಕ್ಕು ಒಂದನ್ನು ಬಿಟ್ಟರೆ ಅದು ಮೃದ್ವಂಗಿ. ಅಂದರೆ, ಉಳಿದೆಲ್ಲ ದೇಹದಲ್ಲಿ ಗಟ್ಟಿ ಅಂಗ ಯಾವುದೂ ಇಲ್ಲ. ಆದರೆ ಮಹಾ ಬುದ್ಧಿವಂತ ಜೀವಿ. ನೀರೊಳಗೆ ಗಾಜಿನ ಭರಣಿಯಲ್ಲಿ ಇವನ್ನು ಕೂಡಿ ಹಾಕಿದ್ದರೆ ಭರಣಿಯ ತಿರುಪಣಿ ಮುಚ್ಚಳವನ್ನೂ ತೆಗೆದು ಈಚೆ ಬರುತ್ತದೆ. ತೆಂಗಿನ ಚಿಪ್ಪನ್ನು ಒಂದೆರಡು ಕೈಗಳಲ್ಲಿ ಹಿಡಿದು ಈಜುತ್ತ, ವೈರಿಯಿಂದ ತಪ್ಪಿಸಿಕೊಳ್ಳಲು ತನ್ನ ಇಡೀ ಶರೀರವನ್ನು ಅದರೊಳಕ್ಕೆ ತೂರಿಸಿ ಅಡಗಿಕೊಳ್ಳುತ್ತದೆ. ಉಪ್ಪುನೀರಿನ ಪೆಟ್ಟಿಗೆಯಲ್ಲಿ ಇಟ್ಟರೆ ಮುಚ್ಚಳ ತೆಗೆದುಕೊಂಡು ಪರಾರಿ ಆಗುತ್ತದೆ.

ಅಥವಾ ರಾತ್ರಿ ವೇಳೆ ದೀಪದ ಮೇಲೆ ಶಾಯಿಯನ್ನು ಎರಚಿ, ಕತ್ತಲನ್ನು ನಿರ್ಮಿಸಿಕೊಂಡು ನಿದ್ರಿಸುತ್ತದೆ. ನಿದ್ದೆಯಲ್ಲಿ ಅದರ ಇಡೀ ಶರೀರದ ಮೈಬಣ್ಣ ಬದಲಾಗಿರುತ್ತದೆ. ಆಕ್ಟೊಪಸ್ ಭವಿಷ್ಯವನ್ನೂ ಹೇಳುತ್ತದೆ ಎಂದು ಅನೇಕ ಪ್ರಯೋಗಗಳ ಮೂಲಕ ಸಾಬೀತು ಮಾಡುವ ಯತ್ನಗಳು ನಡೆದಿವೆ. 2010ರಲ್ಲಿ ದಕ್ಷಿಣ ಆಫ್ರಿಕದಲ್ಲಿ ನಡೆದ ವಿಶ್ವ ಫುಟ್‌ಬಾಲ್ ಪಂದ್ಯದಲ್ಲಿ ಪೌಲ್ ಹೆಸರಿನ ಆಕ್ಟೊಪಸ್‌ಗೂ ವಿಶ್ವಖ್ಯಾತಿ ಬಂದಿತ್ತು. ಆಟದ ವಿವಿಧ ಹಂತಗಳಲ್ಲಿ ಯಾವ ದೇಶ ಗೆಲ್ಲುತ್ತದೆ ಎಂದು ಗಾಜಿನ ಪೆಟ್ಟಿಗೆಯಲ್ಲಿ ಪಟ್ಟಾಗಿ ಕೂತಿದ್ದ ಅದಕ್ಕೆ ಕೇಳಲಾಗುತ್ತಿತ್ತು. ಅಚ್ಚರಿ ಹುಟ್ಟಿಸುವಂತೆ 14 ಪಂದ್ಯಗಳಲ್ಲಿ 12 ಪಂದ್ಯಗಳ ಫಲಿತಾಂಶ ಪೌಲ್ ಹೇಳಿದಂತೆಯೇ ನಿಜವಾಗಿತ್ತು. ಫುಟ್‌ಬಾಲ್ ಹಿಡಿದ ಆ ಅಕ್ಟೊಪಸ್‌ನ ಪುತ್ಥಳಿಯನ್ನು ಜರ್ಮನಿಯ ಓವರ್‌ಹಾಸೆನ್ ಎಂಬಲ್ಲಿ ನಿರ್ಮಿಸಲಾಗಿದೆ. ಗಾತ್ರದಲ್ಲಿ ಮೂರು ಸೆಂಟಿಮೀಟರಿನಿಂದ ಹಿಡಿದು ಮೂರು ಮೀಟರ್‌ನಷ್ಟು ಉದ್ದಕ್ಕೂ ಬೆಳೆಯಬಲ್ಲ ಆಕ್ಟೊಪಸ್‌ಗಳು ಮೂರು ವರ್ಷ ಬದುಕುತ್ತವೆ. ಅಂಥ ವಿಶಿಷ್ಟ ಜೀವಿಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಬಲೆಗೆ ಬಿದ್ದೊ, ಮಾಲಿನ್ಯದಿಂದಾಗಿಯೊ, ಸಮುದ್ರದ ತಾಪಮಾನ ಏರಿಕೆಯಿಂದಾಗಿಯೊ ಅವು ವಿರಳ ಆಗುತ್ತಿವೆ. ರಕ್ಷಿಸೋಣ ಎಂದು ಜಾಗೃತಿ ಮೂಡಿಸಲೆಂದೇ ಅಕ್ಟೊಬರ್ 8ರಂದು ಜಾಗತಿಕ ಆಕ್ಟೊಪಸ್ ದಿನ ಎಂದು ಆಚರಿಸಲಾಗುತ್ತಿದೆ. ಮನುಷ್ಯರನ್ನು ಬಿಟ್ಟರೆ ಡಾಲ್ಫಿನ್‌ಗಳು ಅತ್ಯಂತ ಬುದ್ಧಿವಂತ ಜೀವಿ ಎನ್ನುತ್ತಾರೆ. ಡಾಲ್ಫಿನ್‌ಗಳ ಬುದ್ಧಿವಂತಿಕೆ ವಿಭಿನ್ನವಾದುದು. ಎಂಟು ತೋಳುಗಳಲ್ಲೂ ಮಿದುಳು ಇರುವ ಆಕ್ಟೊಪಸ್‌ನ ಬುದ್ಧಿವಂತಿಕೆ -ಅಷ್ಟಾವಧಾನಿ ಥರಾ!

## ಬೂಟಿನ ದುರ್ಗಂಧ ನಿವಾರಣೆಗೆ ಯೂವಿ ಪೆಟ್ಟಿಗೆ



ನೊಬೆಲ್ ಪ್ರಶಸ್ತಿಗಳ ಬಗ್ಗೆ ನಮಗೆ ಗೊತ್ತು. ವಿಜ್ಞಾನದ ಸರ್ವೋನ್ನತ ಸಾಧನೆಗಳಿಗೆ ಜಾಗತಿಕ ಮಟ್ಟದಲ್ಲಿ ನೀಡುವ ಪ್ರತಿಷ್ಠೆಯ ಪುರಸ್ಕಾರ ಅದು. ಅದಕ್ಕೆ ವ್ಯತಿರಿಕ್ತವಾಗಿ ಇಗ್-ನೊಬೆಲ್ ಪ್ರಶಸ್ತಿಗಳೂ ಇವೆ. ಮೇಲ್ನೋಟಕ್ಕೆ ತೀರ ಕ್ಷುಲ್ಲಕ ಎನಿಸುವ, ನಗೆಬುಗ್ಗೆಯನ್ನು ಎಬ್ಬಿಸಬಲ್ಲ (ಆದರೂ ನಮ್ಮನ್ನು ಯೋಚನೆಗೆ ಹಚ್ಚುವ) ಸಂಶೋಧನೆಗಳಿಗೆ ನೀಡುವ ಪ್ರಶಸ್ತಿ ಇದು. ಇದನ್ನೂ ಜಾಗತಿಕ ಮಟ್ಟದಲ್ಲೇ ನೀಡಲಾಗುತ್ತದೆ. ಉದಾಹರಣೆಗೆ 2003ರಲ್ಲಿ ಬೆಂಗಳೂರಿನ ನಿಮ್ಹಾನ್ಸ್‌ನ ಇಬ್ಬರು ವಿಜ್ಞಾನಿಗಳು ಒಂದು ಸಂಶೋಧನೆಗೆ ಇಗ್ನೊಬೆಲ್ ಪ್ರಶಸ್ತಿ ಸಿಕ್ಕಿತ್ತು.

ಯಾಕೆ ಗೊತ್ತೆ? ಕೆಲವರು ಪದೇ ಪದೇ ಮೂಗಿನೊಳಕ್ಕೆ ಬೆರಳು ಹಾಕಿ ಕಿಟ್ಟವನ್ನು ತೆಗೆಯಲು ಯತ್ನಿಸುತ್ತಿರುತ್ತಾರೆ. ಅದು ಮಾನಸಿಕ ತುಮುಲದ ಸಂಕೇತ ಎಂದು ಅವರು ಸಂಶೋಧನ ಪ್ರಬಂಧ ಬರೆದಿದ್ದರು. ಈ ವರ್ಷ ಇನ್ನೊಂದು ಇಗ್-ನೊಬೆಲ್ ಪ್ರಶಸ್ತಿ ಭಾರತಕ್ಕೆ, ಲಖ್ನೋದ ಇಬ್ಬರು ಎಂಜಿನಿಯರ್‌ಗಳಿಗೆ ಇದೀಗ ಲಭಿಸಿದೆ. ಇವರದೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವ ಸಾಧನೆಯೇ! ದುರ್ನಾತ ಬೀರುವ ಬೂಟುಗಳ ವಾಸನೆಯನ್ನು ನಿವಾರಿಸಬಲ್ಲ ಪೆಟ್ಟಿಗೆಯನ್ನು ಇವರು ರೂಪಿಸಿದ್ದಾರೆ. ಕೆಲವು ಋತುಗಳಲ್ಲಿ, ಕೆಲವರ ಬೂಟು ಮತ್ತು ಕಾಲುಚೀಲಗಳಲ್ಲಿ ಏಕಾಣುಜೀವಿಗಳು ಬೆಳೆದು ಅದರಿಂದಾಗಿಯೇ ದುರ್ನಾತ ಸೂಸುತ್ತದೆ. ಅಂಥ ಪಾದರಕ್ಷೆಗಳನ್ನು ಅತಿನೇರಳೆ (ಯುವಿ) ಕಿರಣಗಳಿಗೆ ಒಡ್ಡಿದರೆ ಏಕಾಣುಜೀವಿಗಳನ್ನು ಕೊಲ್ಲಬಹುದು. ಅಂಥ ಕಿರಣಗಳನ್ನು ರಾತ್ರಿಯಿಡೀ ಸೂಸಬಲ್ಲ ಪೆಟ್ಟಿಗೆಯನ್ನು ಲಖ್ನೋದ ಶಿವ್ ನಾಡಾರ್ ವಿಶ್ವವಿದ್ಯಾಲಯದ ಹಾಸ್ಟೆಲ್‌ಗಳಲ್ಲಿ ವಾಸಿಸುವ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆಂದು ವಿಕಾಸ್ ಕುಮಾರ್ ಮತ್ತು ಸಾರ್ಥಕ್ ಮಿತ್ತಲ್ ಎಂಬಿಬ್ಬರು ಸಿದ್ಧಪಡಿಸಿದ್ದಾರೆ. ಇಗ್-ನೊಬೆಲ್ ಪಡೆದು ಜಾಗತಿಕ ಮಟ್ಟದಲ್ಲಿ ಛಾಪು ಮೂಡಿಸಿದ್ದಾರೆ.

## ಕಡಲ ರಕ್ಷಣೆಗೆ ಹೊಸ 'ಅದಮ್ಯ'ನೌಕಾಪಡೆ:




ಆತ್ಮನಿರ್ಭರ ಭಾರತದ ಹೊಸ ಸಾಧನೆಯ ಸಂಕೇತವಾಗಿ ಭಾರತೀಯ ನೌಕಾದಳದ ಎಂಜಿನಿಯರ್‌ಗಳು ರೂಪಿಸಿದ ಹೊಸ ತಟರಕ್ಷಣಾ ನೌಕೆಗಳಿಗೆ ಅದಮ್ಯ ಎಂದು ಹೆಸರಿಡಲಾಗಿದೆ. ಈಚೆಗೆ (ಸೆಪ್ಟಂಬರ್ 20ರಂದು) ಮೊದಲ ಅದಮ್ಯ ನೌಕೆಯನ್ನು ದೇಶಕ್ಕೆ ಅರ್ಪಣೆ ಮಾಡಲಾಯಿತು. ಇದರ ಶೇ. 60 ಭಾಗವನ್ನು ಭಾರತದಲ್ಲೇ ನಿರ್ಮಿಸಲಾಗಿದ್ದು, ಹಿಂದಿನ ಎಲ್ಲ ತಟರಕ್ಷಕ ನೌಕೆಗಳಿಗಿಂತ ಶಕ್ತಿಶಾಲಿಯಾಗಿದೆ. 52 ಮೀಟರ್ ಉದ್ದದ ಈ ನೌಕೆಯಲ್ಲಿ ತೋಪು ಮತ್ತು ರಿಮೋಟ್ ನಿಯಂತ್ರಿತ ಮಷಿನ್‌ಗನ್‌ಗಳೂ ಇವೆ. ಇದೇ ಹೆಸರಿನ ಇನ್ನೂ ಏಳು ನೌಕೆಗಳು ನಿರ್ಮಾಣ ಹಂತದಲ್ಲಿವೆ.

ನಮ್ಮ ಅದಮ್ಯ ಚೇತನ ಸಂಸ್ಥೆ ಈ ಅದಮ್ಯ ನೌಕೆಗಳ ನಿರ್ಮಾತೃಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.


# ದಾನಚಿಂತಾಮಣಿ ಅತ್ತಿಮಬ್ಬೆ

ವ್ಯಕ್ತಿ ವಿಶೇಷ ಮಾಲಿಕೆ

- ಕೆ. ಜನಾರ್ದನ ತುಂಗ

"ಮೊಲೆವೆತ್ತ ತೈಲಜನನಿಯ ಕೆಲದೊಳ್ ರಂಜಿಪರೆ ಮೀಸೆವೊತ್ತ ಅಣ್ಣಾಗಳ್" ಎಂದು ಕವಿ ರನ್ನನಿಂದ ಹೊಗಳಿಸಿಕೊಂಡ ಅತ್ತಿಮಬ್ಬೆಯು ಚಾಲುಕ್ಯ ಚಕ್ರವರ್ತಿ ಆಹವಮಲ್ಲನ ಭುಜಾದಂಡನೆನಿಸಿದ್ದ ಧಲ್ಲಪನ ಸೊಸೆ; "ಪಂಡಿತಮಂಡಳಿಗಂ ಕವಿಮಂಡಳಿಗಂ ತನ್ನ ಮನೆ ತವರ್ಮನೆ" ಎಂದು ಹೆಮ್ಮೆಯಿಂದ ಕೇಳಿಕೊಂಡ ಮಲ್ಲಪಯ್ಯನ ಮಗಳು. ಹುಟ್ಟಿದ ಮನೆ, ಸೇರಿದ ಮನೆಗಳೆರಡಕ್ಕೂ ಕೀರ್ತಿ ತರುವಂತೆ ಕಲಿಗಳಿಗೂ ಕವಿಗಳಿಗೂ ಆಶ್ರಯ ನೀಡಿದ ಅತ್ತಿಮಬ್ಬೆಯನ್ನು ಪ್ರಶಂಸೆ ಮಾಡುವಷ್ಟು ಶಾಸನಗಳು ಇನ್ನಾವ ಮಹಿಳೆಯ ಬಗ್ಗೆಯೂ ಇಲ್ಲ ಎಂದರೆ ಅತಿಶಯೋಕ್ತಿಯಲ್ಲ.

ಸಾ.ಶ. ಸುಮಾರು ೯೫೦ರಲ್ಲಿ ಆಂಧ್ರಪ್ರದೇಶದ ಪುಂಗನೂರಿನಲ್ಲಿ ಕೌಂಡಿನ್ಯಕುಲಪ್ರದೀಪನೆನಿಸಿದ್ದ ಮಲ್ಲಪಯ್ಯ ಮತ್ತು ಅಪ್ಪಕಬ್ಬೆಯರ ಮಗಳಾಗಿ ಅತ್ತಿಮಬ್ಬೆಯ ಜನನವಾಯಿತು. ಈ ಮಲ್ಲಪಯ್ಯ ಮತ್ತು ಅವನ ತಮ್ಮ ಪೊನ್ನಮಯ್ಯರ ಆಶ್ರಯದಲ್ಲಿದ್ದಾಲೇ ಪೊನ್ನ 'ಶಾಂತಿ ಪುರಾಣ' ವನ್ನು ರಚನೆ ಮಾಡಿದ್ದು. ಅತ್ತಿಮಬ್ಬೆಯು ಬಾಲ್ಯದಲ್ಲಿ ಸಹೋದರರ ಜೊತೆ ಅವರಂತೆಯೇ ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ ಪಡೆದಳು. ಕುದುರೆ ಸವಾರಿ, ಕತ್ತಿವರಸೆ, ಬಿಲ್ವಿದ್ಯೆಯಲ್ಲಿ ಪಳಗಿದಳು. ಕಾಳಗಗಳಲ್ಲೂ ಭಾಗವಹಿಸಿದ್ದಳು, ಗಾಯಾಳುಗಳಿಗೆ ಔಷಧೋಪಚಾರವನ್ನೂ ಮಾಡುತ್ತಿದ್ದಳು ಎಂದು ದಾಖಲೆಗಳು ಹೇಳುತ್ತವೆ.



ಮಲ್ಲಪಯ್ಯ ಅತ್ತಿಮಬ್ಬೆ ಮತ್ತು ಗುಂಡಮಬ್ಬೆ ಎಂಬ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ತೈಲಪನ ಪ್ರಧಾನ ಮಂತ್ರಿ ಧಲ್ಲಪನ ಮಗ, ನಾಗದೇವನಿಗೆ ಕೊಟ್ಟು ಮದುವೆ ಮಾಡಿಸಿದ (ಸಾ.ಶ. ೯೬೫). ನಂತರ, ಆಕೆ ತಂಗಿಯೊಡನೆ ಪತಿಯ ಊರಾದ ಲಕ್ಕುಂಡಿಯಲ್ಲಿ ನೆಲೆಸಿದಳು. ಅಂದು ಲೊಕ್ಕಿಯಗುಂಡಿ ಎಂದು ಹೆಸರಾಗಿದ್ದ ಲಕ್ಕುಂಡಿ ಇಂದ್ರನ ಅಮರಾವತಿಗೂ ಮಿಗಿಲೆಂದು ಪ್ರಶಂಸೆ ಪಡೆದಿತ್ತು. ಇದೇ ಸಂದರ್ಭದಲ್ಲಿ ಅಂದರೆ ಸಾ.ಶ. ೯೭೩-೭೪ರಲ್ಲಿ ತೈಲಪನು ಸ್ವತಂತ್ರನಾಗಿ ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸುವಾಗ ಅವನಿಗೆ ಬಲಗೈಯಂತಿದ್ದವನು ಧಲ್ಲಪ. ಮುಂದೆ ಪತಿ ನಾಗದೇವ ಯುದ್ಧವೊಂದರಲ್ಲಿ ಮಡಿದಾಗ ಅತ್ತಿಮಬ್ಬೆಗೆ ಕೇವಲ ೩೪ ವರ್ಷ ವಯಸ್ಸು. ತಂಗಿ ಗುಂಡಮಬ್ಬೆ ನಾಗದೇವನೊಡನೆ ಸಹಗಮನ ಮಾಡಿದರೆ, ಅತ್ತಿಮಬ್ಬೆ ಕಿರಿಯ ವಯಸ್ಸಿನ ಅಣ್ಣಿಗದೇವನನ್ನು ಬೆಳೆಸುವ ಜವಾಬ್ದಾರಿಯನ್ನು ಹೊತ್ತುಕೊಂಡಳು. ನಾಗದೇವ ತೀರಿಕೊಂಡಾಗ ಅವನ ಅಂತ್ಯಸಂಸ್ಕಾರದಲ್ಲಿ ತೈಲಪನೇ ಸ್ವತಃ ಲಕ್ಕುಂಡಿಗೆ ಬಂದಿದ್ದನೆಂದರೆ ಧಲ್ಲಪ, ನಾಗದೇವರಿಗೆ ಇದ್ದ ಸ್ಥಾನಮಾನದ ಅರಿವುಂಟಾಗುತ್ತದೆ.

ಪತಿಯ ನಿಧನದ ನಂತರ ಅತ್ತಿಮಬ್ಬೆಯು ತೈಲಪನಿಗೆ ರಾಜಮಾತೆಯಂತೆ ಸಲಹೆ ನೀಡುತ್ತಿದ್ದಳು ಎಂಬ ಉಲ್ಲೇಖವಿದೆ. ಆಕೆಯು ತನ್ನ ಮಗ ಅಣ್ಣಿಗದೇವನನ್ನು ರೂಪಿಸಿದ ಪರಿ ಅನನ್ಯವಾದುದು.



(ಅತ್ತಿಮಬ್ಬೆ ನಿರ್ಮಿಸಿರುವ ಜೈನ ದೇಗುಲ)

ಬುಧಜನವಂದಿತೆ ಧರ್ಮ
ಪ್ರಭಾನ ದರ್ಶನ ವಿಶುದ್ಧೆ ದಾನಗುಣೈಕಾಂ
ಬುಧಿಯೆನಿಸಿದ ಕವಿವರಕಾ
ಮಧೇನುವೆಂಬುದತ್ತಿಮಬ್ಬೆಯನೆ ಜಗಂ
-ರನ್ನ ಕವಿ.

೧೦೦೭ರಲ್ಲಿ ಲಕ್ಕುಂಡಿಯಲ್ಲಿ ಒಂದು ವಿಶಾಲವಾದ ಜೈನ ಬಸದಿಯನ್ನು ನಿರ್ಮಿಸಿ ಅದರ ನಿರ್ವಹಣೆಗೆ ಅಗತ್ಯವಾದ ವ್ಯವಸ್ಥೆಯನ್ನೂ ಮಾಡಿದಳು. ಆಕೆಯ ಪ್ರಜಾನುರಾಗ ಹಾಗೂ ಸರ್ವಧರ್ಮಸಮನ್ವಯತೆ ಎಷ್ಟು ಪ್ರಸಿದ್ಧವಾಗಿತ್ತೆಂದರೆ ಆಕೆಯ ಕಾಲಾನಂತರ "ಜಿನನಿಗೂ ಬ್ರಹ್ಮನಿಗೂ ಭೇದವಿಲ್ಲ" ಎಂಬುದರ ಸೂಚಕವಾಗಿ ಆ ಬಸದಿಯನ್ನು "ಬ್ರಹ್ಮ ಜಿನಾಲಯ" ಎಂದು ಜನರು ಕರೆಯತೊಡಗಿದರು.ಇರಿವಬೆಡಂಗ ಸತ್ಯಾಶ್ರಯನ ಸೈನ್ಯಾಧೀಶನಾದ ಅಣ್ಣಿಗನಿಗೆ ಸ್ವತಃ ಚಕ್ರವರ್ತಿಯೇ "ಪಡೆವಳ ತೈಲಪ, ಆಳ್ದನ ಚಕ್ರಂ, ಪತಿಮೆಚ್ಚೆ ಗಂಡಂ, ಆಯುಧಾಚಾರ್ಯ" ಮುಂತಾದ ಪ್ರಶಸ್ತಿಗಳ ಸರಮಾಲೆಯನ್ನೇ ತೊಡಿಸಿದ್ದ.

ಮಗನ ಭವಿಷ್ಯವನ್ನು ರೂಪಿಸುವುದರ ಜೊತೆಗೆ ಆಳ್ವಿಕೆಯ ಜವಾಬ್ದಾರಿಯನ್ನೂ ಯಶಸ್ವಿಯಾಗಿ ನಿರ್ವಹಿಸಿದ ಅತ್ತಿಮಬ್ಬೆ, ಅತ್ಯಂತ ಸರಳ, ಧಾರ್ಮಿಕ ಜೀವನವನ್ನು ನಡೆಸಿದಳು. ಪಂಚಾಣುವ್ರತ ಸ್ವೀಕರಿಸಿ ಶ್ರಾವಕಿಯಾದಳು. ಆಹಾರದಾನ, ಅಭಯದಾನ, ಔಷಧದಾನ ಮತ್ತು ಶಾಸ್ತ್ರದಾನಕ್ಕಾಗಿ ತನ್ನ ಸರ್ವಸಂಪತ್ತನ್ನೂ ವಿನಿಯೋಗಿಸಿದಳು. ಆಕೆ ಧರ್ಮ ಮತ್ತು ಕಲೆಗಳ ಪುನರುಜ್ಜೀವನಕ್ಕಾಗಿ ತನ್ನ ಬದುಕನ್ನು ಸವೆಸಿದಳು.

ಇಂದಿನ ಆಳುಗರಿಗೂ ಮಾದರಿಯಾಗುವಂತೆ ಆಕೆ, ಕವಿಗಳಿಗೆ, ಕಲಾವಿದರಿಗೆ ಆಶ್ರಯ ನೀಡಿದಳು. ಮೇರುಕವಿ ರನ್ನನ ಅಜಿತಪುರಾಣ ಮತ್ತು ತವರೂರ ಕವಿ, ಪೊನ್ನನ ಶಾಂತಿಪುರಾಣದ ಒಂದು ಸಾವಿರ ತಾಳೆಗರಿಪ್ರತಿಗಳನ್ನು ತಯಾರಿಸಿ ಉಚಿತವಾಗಿ ಹಂಚುವ ಮೂಲಕ ಶಾಸ್ತ್ರದಾನದ ಮೇಲ್ಪಂಕ್ತಿಯನ್ನು ಹಾಕಿದಳು. ಆಕೆ ೧೫೦೧ ಜಿನಗೃಹ (ಚೈತ್ಯಾಲಯ) ಗಳನ್ನು ಕಟ್ಟಿಸಿದಳು. ೧೫೦೦ ಬಂಗಾರದ ಜಿನಬಿಂಬಗಳನ್ನೂ ಮಾಡಿಸಿ ಭಕ್ತರಿಗೆ ದಾನವಾಗಿ ನೀಡಿದಳು. ಆರ್ಯಿಕೆಯರಿಗೆ ಆಹಾರ ದಾನ ಮಾಡುವ ಮೂಲಕ ಅವರ ಸಾಧನೆ ನಿರಾತಂಕವಾಗಿ ಸಾಗಲು ಅನುವು ಮಾಡಿಕೊಟ್ಟಳು.

ಅತ್ತಿಮಬ್ಬೆಯು ದಾನಧರ್ಮಗಳಿಗಾಗಿ ತನ್ನ ವೈಯಕ್ತಿಕ ಆಸ್ತಿಯನ್ನೇ ಬಳಸಿದಳು. ರಾಜನಾಗಿದ್ದ ಅಣ್ಣಿಗದೇವನ ತಾಯಿಯಾಗಿದ್ದರೂ ದಾನಕಾರ್ಯಗಳಿಗೆ ಅವನಿಂದಲೂ ಸಹಾಯ ಬಯಸದ ಸ್ವಾಭಿಮಾನಿ ಮಹಿಳೆ, ಆಕೆ.
ಅತ್ತಿಮಬ್ಬೆಯ ಪವಾಡಗಳ ಬಗ್ಗೆ ಸಾಕಷ್ಟು ಕಥೆಗಳಿವೆ. ತೈಲಪನು ಗೋದಾವರಿ ನದಿ ದಾಟಬೇಕಾಗಿ ಬಂದಾಗ ನದಿಯೇ ದಾರಿ ಮಾಡಿಕೊಟ್ಟದ್ದು, ಕಳೆದುಹೋದ ಜಿನಬಿಂಬವನ್ನು ಏಳುದಿನಗಳ ಉಪವಾಸ ಮಾಡಿ ಮರಳಿ ಗಳಿಸಿದ್ದು, ಶ್ರವಣಬೆಳಗೊಳದ ಗೊಮ್ಮಟ ವಿಗ್ರಹವನ್ನು ನೋಡುವವರೆಗೆ ಅನ್ನವನ್ನು ತ್ಯಜಿಸುವೆನೆಂಬ ನಿಯಮವನ್ನು ಪಾಲಿಸಿ, ದರ್ಶನಕ್ಕಾಗಿ ಪರ್ವತವನ್ನು ಹತ್ತಿದಾಗ ಅಕಾಲವೃಷ್ಟಿಯಾದದ್ದು, ಮದಿಸಿದ ಆನೆ ಈಕೆಯೆದುರು ಸೌಮ್ಯವಾದದ್ದು - ಇವು ಅತ್ತಿಮಬ್ಬೆಯದೆಂದು ಹೇಳಲಾದ ಕೆಲವು ಪವಾಡಗಳು.


ಅತ್ತಿಮಬ್ಬೆಯ ಬಗ್ಗೆ ಆಕೆಯ ಜೀವಿತ ಕಾಲದಲ್ಲಿ ಮಾತ್ರವಲ್ಲ ನಂತರವೂ ಹಲವಾರು ವರ್ಷಗಳ ವರೆಗೆ ರಚಿತವಾದ ಶಾಸನಗಳು, ರನ್ನ, ಪೊನ್ನರ ಕಾವ್ಯಗಳು ಅನೇಕ ವಿವರಗಳನ್ನು ನೀಡುತ್ತವೆ.ಅತ್ತಿಮಬ್ಬೆಯು "ಜಿನಶಾಸನದೀಪಿಕೆ, ಕವಿವರ ಕಾಮಧೇನು, ಗುಣದಂಕಕಾರ್ತಿ, ದಾನಚಿಂತಾಮಣಿ, ಗುಣದಖನಿ, ಜೈನಶಾಸನರಕ್ಷಮಣಿ, ಸಜ್ಜನೈಕ ಚೂಡಾಮಣಿ, ಸರ್ವಕಲಾವಿದೆ" ಮುಂತಾದ ಬಿರುದುಗಳಿಗೆ ಪಾತ್ರಳಾಗಿದ್ದಳು. ಕವಿಗಳಿಗೇ ಅಲ್ಲದೆ ಕಥಕರು, ಗಾಯಕರು, ವಾದಕರು, ನಟರು ಮುಂತಾದ ವೃತ್ತಿಕಲಾವಿದರಿಗೆ ಪ್ರೋತ್ಸಾಹ ನೀಡಿ ಕಲಾವಿದರ ಬಾಳಿಗೆ "ಸಮಭಿಲಿಷಿತ ದಾನ ವಿನೋದೆ"ಯಾಗಿದ್ದಳು. ಅಂತಹ ದಾನಚಿಂತಾಮಣಿಯ ಹೆಸರಿನಲ್ಲಿ ಕರ್ನಾಟಕ ಸರಕಾರವು ಮಹಿಳಾ ಸಾಹಿತಿಗಳಿಗೆ "ಅತ್ತಿಮಬ್ಬೆ ಪ್ರಶಸ್ತಿ"ಯನ್ನು ನೀಡುತ್ತಿರುವುದು ಸೂಕ್ತವಾಗಿದೆ.

◆

# ಕೃತಕ ಬುದ್ಧಿಮತ್ತೆ: ಆರೋಗ್ಯ ಕ್ಷೇತ್ರದ ಹೊಸ ಭರವಸೆ"



-ಶ್ರೀ ದಿಲೀಪ್ ಮಂಗ್ಳೂಳಿ




ಕೃತಕ ಬುದ್ಧಿಮತ್ತೆ (AI) ಆರೋಗ್ಯ ಸೇವೆಯಲ್ಲಿ ಮಹತ್ತರ ಬದಲಾವಣೆ ತರುತ್ತಿದೆ. ವಿಶೇಷವಾಗಿ ಭಾರತದಲ್ಲಿ ಸೇವಾ ವಿಸ್ತರಣೆ ಮತ್ತು ವೆಚ್ಚ ಕಡಿತಕ್ಕೆ ಸಂಬಂಧಿಸಿದ ಪ್ರಮುಖ ಸವಾಲುಗಳನ್ನು ಇದು ಪರಿಹರಿಸುತ್ತಿದೆ. ಹೆಚ್ಚುತ್ತಿರುವ ಜನಸಂಖ್ಯೆ, ಆರೋಗ್ಯ ಕಾರ್ಯಕರ್ತರ ಕೊರತೆ ಮತ್ತು ವೈದ್ಯಕೀಯ ಸೇವೆಗಳ ಹೆಚ್ಚಿನ ವೆಚ್ಚಗಳನ್ನು AI ಪರಿಣಾಮಕಾರಿಯಾಗಿ ನಿಭಾಯಿಸುತ್ತದೆ. ಹೆಚ್ಚು ದಕ್ಷ, ಪರಿಣಾಮಕಾರಿ ಮತ್ತು ಎಲ್ಲರಿಗೂ ಲಭ್ಯವಾಗುವಂತಹ ಆರೋಗ್ಯ ವ್ಯವಸ್ಥೆ ನಿರ್ಮಾಣಕ್ಕೆ AI ಪೂರಕವಾಗಿದೆ.

ಆರೋಗ್ಯ ಸೇವೆಯಲ್ಲಿನ ಅಂತರಗಳು

ಇಂದಿಗೂ ವಿಶ್ವದ ಅರ್ಧಕ್ಕಿಂತ ಹೆಚ್ಚು ಜನರಿಗೆ ಮೂಲಭೂತ ಆರೋಗ್ಯ ಸೇವೆಗಳು ಲಭ್ಯವಿಲ್ಲ. 1978ರಲ್ಲಿ ಎಲ್ಲರಿಗೂ ಆರೋಗ್ಯ ಸೇವೆ ಒದಗಿಸುವ ಗುರಿ ಘೋಷಣೆಯಾದರೂ, ಅದು ಇನ್ನೂ ಈಡೇರಿಲ್ಲ. ಭಾರತದಲ್ಲಿ ವೈದ್ಯಕೀಯ ವೆಚ್ಚದ 50% ಜನರ ಜೇಬಿನಿಂದಲೇ ಹೋಗುತ್ತದೆ.

**ಆರೋಗ್ಯ ಕ್ಷೇತ್ರದಲ್ಲಿ □□ನ ಪಾತ್ರ**

AI ಈಗಾಗಲೇ ಹಲವಾರು ಪ್ರಮುಖ ಕ್ಷೇತ್ರಗಳಲ್ಲಿ ಗಮನಾರ್ಹ ಪರಿಣಾಮ ಬೀರುತ್ತಿದೆ:

- **ರೋಗ ಪತ್ತೆ ಸುಧಾರಣೆ:** AI ವೈದ್ಯಕೀಯ ಚಿತ್ರಗಳನ್ನು, ವಿಶೇಷವಾಗಿ ಎಕ್ಸ್-ರೇಗಳನ್ನು, ವೇಗವಾಗಿ ವಿಶ್ಲೇಷಿಸುತ್ತದೆ. ಸಾಮಾನ್ಯ ಪ್ರಕರಣಗಳನ್ನು ಪ್ರಾಥಮಿಕವಾಗಿ ಗುರುತಿಸಿ, ವೈದ್ಯರು ತುರ್ತು ರೋಗಿಗಳ ಕಡೆಗೆ ಗಮನಹರಿಸಲು ಇದು ನೆರವಾಗುತ್ತದೆ. ಪ್ರತಿ ವರ್ಷ ಜಗತ್ತಿನಲ್ಲಿ ತೆಗೆದುಕೊಳ್ಳುವ 3.6 ಶತಕೋಟಿ ಎದೆ ಎಕ್ಸ್-ರೇಗಳ ವಿಶ್ಲೇಷಣೆಯಲ್ಲಿ AI ಬಹಳ ಸಹಾಯಕ.

- **ಗ್ರಾಮೀಣ ಆರೋಗ್ಯ ಸೇವೆ ವೃದ್ಧಿ:** AI-ಚಾಲಿತ ಪೋರ್ಟಬಲ್ ಎಕ್ಸ್-ರೇ ಯಂತ್ರಗಳು ಗ್ರಾಮೀಣ ಪ್ರದೇಶಗಳಲ್ಲಿ ಕ್ಷಯರೋಗ(TB)ದ ತ್ವರಿತ ಪತ್ತೆಗೆ ಸಹಕಾರಿಯಾಗುತ್ತವೆ. ಒಂದು ನಿಮಿಷದಲ್ಲೇ ಫಲಿತಾಂಶ ನೀಡುವ ಈ ಸಾಧನಗಳು ಗ್ರಾಮೀಣ ಆರೋಗ್ಯ ಸೇವೆಗೆ ಕ್ರಾಂತಿಕಾರಕ.

- **ಮುನ್ಸೂಚನೆಯ ಚಿಕಿತ್ಸೆಯ ಪ್ರೋತ್ಸಾಹ:** "ಪೇಷೆಂಟ್ ಟ್ವಿನ್ನಿಂಗ್" ಎಂಬ ಪರಿಕಲ್ಪನೆಯಡಿ ರೋಗಿಯ ಜೀವನಶೈಲಿ, ಆರೋಗ್ಯ ಮತ್ತು ಪರಿಸರದ ಆಧಾರದ ಮೇಲೆ ವರ್ಚುವಲ್ ಮಾದರಿ ರಚಿಸಿ ಹೃದಯಾಘಾತದಂತಹ ಘಟನೆಗಳನ್ನು ಮುಂಚಿತವಾಗಿ ಊಹಿಸಬಹುದು. ತಡೆಗಟ್ಟುವ ಚಿಕಿತ್ಸೆಯು ಯಾವತ್ತೂ ಕಡಿಮೆ ವೆಚ್ಚದ ಮತ್ತು ಹೆಚ್ಚು ಪರಿಣಾಮಕಾರಿ.




**ಭಾರತದ ಮುನ್ನಡೆಸುವ ಸಾಮರ್ಥ್ಯ**

ಭಾರತವು ಆರೋಗ್ಯ ಕ್ರಾಂತಿಯನ್ನು ಮುನ್ನಡೆಸಲು ಉತ್ತಮ ಸ್ಥಿತಿಯಲ್ಲಿದೆ. ರಾಷ್ಟ್ರೀಯ ಡಿಜಿಟಲ್ ಹೆಲ್ತ್ ಮಿಷನ್ ಮೂಲಕ AIಗೆ ಅಗತ್ಯವಾದ ಡೇಟಾ ಮೂಲಸೌಕರ್ಯವನ್ನು ನಿರ್ಮಿಸಲಾಗುತ್ತಿದೆ. ಇದರೊಂದಿಗೆ ರೋಗಿಯ ಡೇಟಾದ ಗೌಪ್ಯತೆ ಹಾಗೂ ಸುರಕ್ಷತೆಯನ್ನು ಖಚಿತಪಡಿಸಲಾಗುತ್ತಿದೆ. ವೈದ್ಯರಿಗೆ ರೋಗಿಯ ಆರೋಗ್ಯ ಇತಿಹಾಸದ ಸಂಪೂರ್ಣ ಚಿತ್ರಣ ದೊರೆಯುವುದರಿಂದ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಇದು ನೆರವಾಗುತ್ತದೆ. ಈಗಾಗಲೇ 1.3–1.4 ಲಕ್ಷ ಕ್ಯಾನ್ಸರ್ ರೋಗಿಗಳ ಚಿಕಿತ್ಸೆಯಲ್ಲಿ AI ಬಳಕೆಯಾಗಿದೆ. AI ಮತ್ತು IoT ಆಧಾರಿತ ತಂತ್ರಜ್ಞಾನಗಳನ್ನು ತಡೆಗಟ್ಟುವಿಕೆಗೆ ಬಳಸುವುದರಿಂದ ಭಾರತವು ಜಾಗತಿಕ ಮಾದರಿಯನ್ನು ಸ್ಥಾಪಿಸಬಹುದು.

**ಭವಿಷ್ಯದ ದಾರಿ:**



ಆರೋಗ್ಯ ಸೇವೆಯ ಭವಿಷ್ಯವು ಕೇವಲ ಚಿಕಿತ್ಸೆಗಿಂತಲೂ ಮುನ್ನೆಚ್ಚರಿಕೆ ಮತ್ತು ತಡೆಗಟ್ಟುವಿಕೆಯನ್ನು ಪ್ರಧಾನವಾಗಿ ಗಮನಿಸುತ್ತದೆ. ಚೀನಾದ ಶಾಂಘೈ ಮಾದರಿಯಲ್ಲಿ ಕುಟುಂಬ ವೈದ್ಯರಿಗೆ ಸದಸ್ಯರನ್ನು ಆ ರೋ ಗ್ಯ ವಾ ಗಿ ಟ್ಟು ಕೊ ಳ್ಳ ಲು ಪ್ರೋತ್ಸಾಹ ನೀಡಲಾಗುತ್ತದೆ. ಈ ಭಾರತವು ಮನೋಭಾವವನ್ನು ಅಳವಡಿಸಿಕೊಂಡು, AI ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿದರೆ ಸಮಾನತೆ, ಲಭ್ಯತೆ ಮತ್ತು ಕೈಗೆಟುಕುವಿಕೆಯನ್ನು ಒಳಗೊಂಡ ಸಮಗ್ರ ಆರೋಗ್ಯ ವ್ಯವಸ್ಥೆಯನ್ನು ನಿರ್ಮಿಸಬಹುದು.

ಆರೋಗ್ಯ ಸೇವೆಯ ಭವಿಷ್ಯವು ತಂತ್ರಜ್ಞಾನವನ್ನು ಬಳಸಿಕೊಂಡು ರೋಗ ಬಂದ ಮೇಲೆ ಚಿಕಿತ್ಸೆ ನೀಡುವುದಕ್ಕಿಂತ, ಅದನ್ನು ತಡೆಗಟ್ಟುವ ಮತ್ತು ಪೂರ್ವಭಾವಿಯಾಗಿ ನಿರ್ವಹಿಸುವ ಮಾದರಿಗೆ ಬದಲಾಗುವುದು. AI ಆರೋಗ್ಯ ಕ್ಷೇತ್ರದಲ್ಲಿ ಕೇವಲ ತಂತ್ರಜ್ಞಾನವಲ್ಲ, ಜೀವ ಉಳಿಸುವ ಶಕ್ತಿ. ಸೇವಾ ವಿಸ್ತರಣೆ, ವೆಚ್ಚ ನಿಯಂತ್ರಣ ಮತ್ತು ತಡೆಗಟ್ಟುವಿಕೆಗೆ ಒತ್ತು ನೀಡುವುದರ ಮೂಲಕ ಇದು ಆರೋಗ್ಯ ಸೇವೆಯನ್ನು ಜನಸಾಮಾನ್ಯರ ಮನೆಬಾಗಿಲಿಗೆ ತರುವ ಸಾಮರ್ಥ್ಯ ಹೊಂದಿದೆ. ಭಾರತವು AI ನ ಸಹಾಯದಿಂದ "ಆರೋಗ್ಯ ಭಾರತ"ವನ್ನು ಕಟ್ಟಲು ಮುಂಚೂಣಿಯಲ್ಲಿರಬಲ್ಲದು. ◆

## ಅನಂತ ಪ್ರೇರಣಾ ಕೇಂದ್ರದಲ್ಲಿ ನವೀನ ಕೃಷಿ ಪದ್ಧತಿಗಳ ಕುರಿತು ಕಾರ್ಯಾಗಾರ




ಶ್ರೀ ಅನಂತಕುಮಾರ್ ಅವರ ಸ್ಮರಣಾರ್ಥವಾಗಿ ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನ ಸಂಸ್ಥೆಯು ಸ್ಥಾಪಿಸಿರುವ ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರವು, ಕೇವಲ ವಸ್ತುಸಂಗ್ರಹಾಲಯವಾಗಿರದೆ, ಯುವಜನತೆ ಮತ್ತು ಸಮಾಜಕ್ಕೆ ಪ್ರೇರಣೆ ನೀಡುವ ಜ್ಞಾನ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕೇಂದ್ರವು ವಿವಿಧ ಕ್ಷೇತ್ರಗಳ ಕಾರ್ಯಾಗಾರಗಳನ್ನು ಆಯೋಜಿಸುವ ಮೂಲಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿದೆ.

ಸಂಸ್ಥೆಯ ಈ ಉದ್ದೇಶದ ಭಾಗವಾಗಿ, ದಿನಾಂಕ: 7-9-2025 ರಂದು ಆಯೋಜಿಸಿದ್ದ ಶಿಕ್ಷಿತ ಕೃಷಿಕರಿಗಾಗಿ ಒಂದು ದಿನದ ಕಾರ್ಯಾಗಾರವು ಯಶಸ್ವಿಯಾಗಿ ನಡೆಯಿತು. ಖ್ಯಾತ ತಜ್ಞರಾದ ಅತುಲ್ ಮಾರ್ಡಿಕರ್ ಅವರು ನುಗ್ಗೆ ಸೊಪ್ಪು, ಕರಿಬೇವು, ಹಣ್ಣುಗಳು, ಟೊಮೆಟೊ, ಶುಂಠಿ ಮುಂತಾದವುಗಳ ನಿರ್ಜಲೀಕರಣ (Dehydration) ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡಿದರು. ವಿಶೇಷವಾಗಿ, ನುಗ್ಗೆ ಸೊಪ್ಪಿನ ಪುಡಿ ತಯಾರಿಸುವ ವಿಧಾನ ಮತ್ತು ಅದರ ಮಾರುಕಟ್ಟೆ ನಿರ್ವಹಣೆಯ ಬಗ್ಗೆ ವಿವರವಾಗಿ ತಿಳಿಸಿಕೊಟ್ಟರು. ಕಾರ್ಯಾಗಾರದ ನಂತರ, ರೈತ ಸಮಿತಿಗಳ ರಚನೆ ಮತ್ತು ರೈತ ಉತ್ಪನ್ನಗಳ ಮೌಲ್ಯವರ್ಧನೆ ಕುರಿತು ಮಾಹಿತಿ ನೀಡಿದರು. ಕಾರ್ಯಾಗಾರ ಮುಗಿದ ನಂತರ, ಅನಂತ ಪ್ರೇರಣಾ ಕೇಂದ್ರವನ್ನು ವೀಕ್ಷಿಸಿದ ರೈತರು ಮೆಚ್ಚುಗೆ ವ್ಯಕ್ತಪಡಿಸಿದರು.



**ಹುಬ್ಬಳ್ಳಿ:** ಸಂಸ್ಕೃತ ಭಾರತಿ ಮತ್ತು ಅನಂತ ಪ್ರೇರಣಾ ಕೇಂದ್ರದ ಸಹಯೋಗದಿಂದ ಹುಬ್ಬಳ್ಳಿಯಲ್ಲಿ ಮಕ್ಕಳಿಗಾಗಿ ಪ್ರತೀ ಶನಿವಾರ ಸಂಜೆ 4 ರಿಂದ 6 ಗಂಟೆಯವರೆಗೆ ಶ್ರೀ ಕೃಷ್ಣದೇವರಾಯ ಎಂಬ 'ಬಾಲ ಕೇಂದ್ರ' ಅಭ್ಯಾಸ ವರ್ಗಗಳನ್ನು ನಡೆಸುತ್ತಿದೆ. ಈ ವರ್ಗಗಳು ಕೇವಲ ಸಂಸ್ಕೃತ ಭಾಷಾ ಕಲಿಕೆಗೆ ಸೀಮಿತವಾಗಿಲ್ಲ, ಬದಲಾಗಿ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಮತ್ತು ದೇಶೀಯ ಸಂಸ್ಕೃತಿಯ ಬಗ್ಗೆ ಜಾಗೃತಿ ಮೂಡಿಸುವ ಗುರಿ ಹೊಂದಿವೆ.

ಈ ಕಾರ್ಯಕ್ರಮದಲ್ಲಿ ಸುಮಾರು 60 ರಿಂದ 70 ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಮಕ್ಕಳಿಗಾಗಿ ಸಂಸ್ಕೃತ ಸಂಭಾಷಣೆ, ಸುಭಾಷಿತಗಳು, ಭಾರತೀಯ ಕಥೆಗಳು ಹಾಗೂ ದೇಶೀಯ ಕ್ರೀಡೆಗಳನ್ನು ಆಡಿಸಲಾಗುತ್ತದೆ. ಇದು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದೆ.

# ತಿಂಗಳ ವರದಿ

**( ಆಗಸ್ಟ್ - ಸೆಪ್ಟೆಂಬರ್ ) 2025)**

### ಮಂಗಳೂರಿನಲ್ಲಿ ಅದಮ್ಯ ಚೇತನದ 27ನೇ ಅನಂತ ಪ್ಲೇಟ್ ಬ್ಯಾಂಕ್ ಉದ್ಘಾಟನೆ:

ಪರಿಸರ ಸಂರಕ್ಷಣೆಯ ಮಹತ್ವಾಕಾಂಕ್ಷೆಯೊಂದಿಗೆ, ಐಸಿರಿ ಫೌಂಡೇಶನ್ ಮತ್ತು ಅದಮ್ಯ ಚೇತನ ಸಂಸ್ಥೆಗಳ ಸಹಯೋಗದಲ್ಲಿ ಮಂಗಳೂರಿನಲ್ಲಿ ಅನಂತ ಪ್ಲೇಟ್ ಬ್ಯಾಂಕ್‌ನ 27ನೇ ಘಟಕವು ಆಗಸ್ಟ್ 28 ರಂದು ಉದ್ಘಾಟನೆಗೊಂಡಿತು. ಈ ಕಾರ್ಯಕ್ರಮವು ಪರಿಸರ ಸ್ನೇಹಿ ಪರ್ಯಾಯಗಳನ್ನು ಜನರಿಗೆ ಪರಿಚಯಿಸುವ ಮೂಲಕ ಪ್ಲಾಸ್ಟಿಕ್ ಮುಕ್ತ ಸಮಾಜವನ್ನು ನಿರ್ಮಿಸುವ ಗುರಿ ಹೊಂದಿದೆ. ಕಾರ್ಯಕ್ರಮದ ಇದೇ ಸಂದರ್ಭದಲ್ಲಿ, ಅದಮ್ಯ ಚೇತನ ಸಂಸ್ಥೆಯ ಸಂಸ್ಥಾಪಕಿ ಮತ್ತು ಸಮಾಜ ಸೇವಕಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರನ್ನು ಅವರ ಸಮಾಜ ಸೇವಾ ಕ್ಷೇತ್ರದಲ್ಲಿನ ಅಪ್ರತಿಮ ಕೊಡುಗೆಗಾಗಿ 'ಐಸಿರಿ ಸಾಧಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಜೋಧಪುರದಲ್ಲಿ ಉಚಿತ ಅನ್ನದಾನ ಸೇವೆ:

ರಾಜಸ್ಥಾನದ ಜೋಧಪುರದಲ್ಲಿರುವ ಉಮ್ಮೇದ್ ಆಸ್ಪತ್ರೆಯ ಆವರಣದಲ್ಲಿ, ಆಗಸ್ಟ್ 14, 2025ರಂದು ಅದಮ್ಯ ಚೇತನ ಸಂಸ್ಥೆ ಮತ್ತು ನಿರ್ಮಲ್ ಗೆಹಲೋಟ್ ಚಾರಿಟೇಬಲ್ ಟ್ರಸ್ಟ್ ಸಹಯೋಗದೊಂದಿಗೆ ರೋಗಿಗಳಿಗೆ ಹಾಗೂ ಅವರ ಕುಟುಂಬಗಳಿಗೆ ಉಚಿತ ಅನ್ನದಾನ ಸೇವೆಯನ್ನು ಪ್ರಾರಂಭಿಸಿತ್ತು. ಈ ಕೇಂದ್ರದಲ್ಲಿ ಪ್ರತಿದಿನ 400ಕ್ಕೂ ಹೆಚ್ಚು ಜನರು ಶುದ್ಧ, ಸಾತ್ವಿಕ ಆಹಾರವನ್ನು ಸೇವಿಸುತ್ತಿದ್ದಾರೆ ಮತ್ತು ಇಲ್ಲಿಯವರೆಗೆ 13,000ಕ್ಕೂ ಹೆಚ್ಚು ಜನರು ಈ ಸೇವೆಯನ್ನು ಪಡೆದಿದ್ದಾರೆ.

ಪ್ರತಿದಿನ ಮಧ್ಯಾಹ್ನ 12:30 ರಿಂದ 2:30 ರವರೆಗೆ ಅನ್ನ, ಬೇಳೆ, ತರಕಾರಿ, ಚಪಾತಿ ಮತ್ತು ಸಿಹಿ ತಿನಿಸುಗಳೊಂದಿಗೆ ಪೂರ್ಣ ಊಟವನ್ನು ನೀಡಲಾಗುತ್ತದೆ. ಅನೇಕ ಜನರು ತಮ್ಮ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ ಅಥವಾ ಇತರ ವಿಶೇಷ ಸಂದರ್ಭಗಳಲ್ಲಿ ಸಮಾಜಕ್ಕೆ ಕೊಡುಗೆ ನೀಡಲು ಈ ಅನ್ನದಾನ ಸೇವೆಗೆ ದೇಣಿಗೆ ನೀಡುತ್ತಿದ್ದಾರೆ. ಅದಮ್ಯ ಚೇತನದ ಈ ಸೇವಾ ಕಾರ್ಯವನ್ನು ಸ್ಥಳೀಯ ಪತ್ರಿಕೆಗಳು ಶ್ಲಾಘಿಸಿವೆ.

**ಹಸಿರು ಭಾನುವಾರ:** ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 504 ರಿಂದ 508ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು. 504, 504, 505, 506, 507, ಮತ್ತು 508 ಹಸಿರು ಭಾನುವಾರಗಳನ್ನು ಕ್ರಮವಾಗಿ, ಬೆಂಗಳೂರಿನ ಕೃಷ್ಣಪ್ಪನಗರ, ಹಾಲನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಯ ಆವರಣ, ಸೇಂಟ್ ಜಾನ್ಸ್ ರಸ್ತೆಯ ಬಿ. ಎಂ. ಇಂಗ್ಲೀಷ್ ಶಾಲೆಯ ಆವರಣ, ಬೆಂಗಳೂರಿನ ಕನಕಪುರ ಮುಖ್ಯ ರಸ್ತೆಯ ಬ್ರಿಗೇಡ್ ಮೆಡೋಸ್ ಹಂತ -1 ಆವರಣ ನೆಮ್ಮದಿ ಪಾಲಿಯೇಟಿವ್ ಕೇರ್ ಸೆಂಟರ್ ನೆಲಮಂಗಲ ಆರ್‌ಟಿಓ ಹತ್ತಿರದ ಆವರಣ, ಬೆಂಗಳೂರಿನ ಬಿ ಪಿ ವಾಡಿಯಾ ರಸ್ತೆಯ ಅನಂತವನದ ಆವರಣದಲ್ಲಿ ನಡೆಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಯುತ್ ಫಾರ್ ಸೇವಾ ಸಂಸ್ಥೆಯ ಕಾರ್ಯಕರ್ತರು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ. ಶ್ರೀಚೇತನ ಸಭೆ, ಪ್ಲೇಟ್ ಬ್ಯಾಂಕ್ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

ಅನಂತಪಥ

Published by: Tejaswini Ananthkumar

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಅದಮ್ಯ ಚೇತನ ಸಂಸ್ಥೆಯ ಕಚೇರಿಯಲ್ಲಿ ಗೌರಿ -ಗಣೇಶ ಹಬ್ಬದ ಆಚರಣೆ



ವಾಸವಿ ಸಮೂಹ ವಿದ್ಯಾಸಂಸ್ಥೆಗಳ ವಾಸವಿ ಜ್ಞಾನಪೀಠ ಪ್ರಥಮ ದರ್ಜೆ ಕಾಲೇಜಿನ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದರು.



ಶಾಲಾ ಶಿಕ್ಷಣ ಇಲಾಖೆ ಮತ್ತು ಎಚ್ ಎನ್ ಅನಂತಕುಮಾರ್ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ಬಿಡದಿಯಲ್ಲಿರುವ ಕಾಲೇಜು ಮೈದಾನದಲ್ಲಿ ರಾಮನಗರ ತಾಲೂಕು ಮಟ್ಟದ ಕ್ರೀಡಾ ಕೂಟವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಉದ್ಘಾಟಿಸಿದರು.



ಸೆಪ್ಟೆಂಬರ್ 01. ರಂದು ಎನ್ಐಟಿ ಕುರುಕ್ಷೇತ್ರದಲ್ಲಿ ರೋಬೋಟಿಕ್ಸ್ ಮತ್ತು ಕೈಗಾರಿಕಾ ಇಂಜಿನಿಯರಿಂಗ್ ವಿಭಾಗವನ್ನು ಮಾನ್ಯ ಆಡಳಿತ ಮಂಡಳಿಯ ಅಧ್ಯಕ್ಷೆ ಡಾ. ತೇಜಸ್ವಿನಿ ಅನಂತಕುಮಾರ್ ಉದ್ಘಾಟಿಸಿದರು.



ಶ್ರೀಮತಿ ಎಚ್.ಆರ್. ದೇವಕಿ ಅವರ ಸಹಸ್ರ ಪೂರ್ಣಚಂದ್ರ ದರ್ಶನದ ಅಂಗವಾಗಿ ನಡೆದ ಮಿತ್ರ ಸಮ್ಮಿಲನ ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದರು




ಅದಮ್ಯ ಚೇತನದಲ್ಲಿ ಪ್ರತಿ ಗುರುವಾರ ನಡೆಯುವ ಭಗವದ್ಗೀತೆಯ ಸಂದರ್ಭದ ಚಿತ್ರ




ರಾಜಸ್ಥಾನದ ಜೋಧಪುರದಲ್ಲಿರುವ ಉಮ್ಮೇದ್ ಆಸ್ಪತ್ರೆಯ ಆವರಣದಲ್ಲಿಅದಮ್ಯ ಚೇತನದಿಂದ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದೆ.



ಅದಮ್ಯ ಚೇತನದ ಹಸಿರು ಭಾನುವಾರ 508ನೇ ಹಸಿರು ಭಾನುವಾರ ಕಾರ್ಯಕ್ರಮ ಬೆಂಗಳೂರಿನ ಬಿ ಪಿ ವಾಡಿಯಾ ರಸ್ತೆಯ ಅನಂತವನದ ಆವರಣದಲ್ಲಿ ಯಶಸ್ವಿಯಾಗಿ ಜರುಗಿತು.

# ಅನಂತ ಚಿತ್ರಸಂಪುಟ







